
# 10ನೇ ತರಗತಿ ಸಿರಿ–ಕನ್ನಡ









# ಮ್ಯಾಜಿಕ್ ನಂಬರ್ ೩೫+

(ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ)

ಬಸವರಾಜ.ಟಿ.ಎಂ
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ,ರೂಪನಗುಡಿ
ಬಳ್ಳಾರಿ ಪೂರ್ವ ವಲಯ, ಬಳ್ಳಾರಿ ಜಿಲ್ಲೆ

## ಪಾಠಗಳ ಅಂಕ ಹಂಚಿಕೆ.

### 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು |
|---|---|---|
| 1 | ಶಬರಿ | 4 |
| 2 | ಅಮೆರಿಕದಲ್ಲಿ ಗೊರೂರು | 4 |
| 3 | ಜೀವನದೃಷ್ಟಿ | 3 |
| 4 | ಧರ್ಮಸಮದೃಷ್ಟಿ | 3 |
| 5 | ಭಾಗ್ಯಶಿಲ್ಪಿ ಸರ್ ಎಂ ವಿಶ್ವೇಶ್ವರಯ್ಯ | 3 |
| 6 | ಎದೆಗೆ ಬಿದ್ದ ಅಕ್ಷರ | 3 |
| 7 | ವೃಕ್ಷ ಸಾಕ್ಷಿ | 3 |
| 8 | ವ್ಯಾಘ್ರಗೀತೆ | 3 |
| | ಒಟ್ಟು | 26 |

### 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು |
|---|---|---|
| 1 | ಎಮ್ಮ ನುಡಿಗೇಳ್ | 4 |
| 2 | ಹಕ್ಕಿ ಹಾರುತಿದೆ ನೋಡಿದಿರಾ | 4 |
| 3 | ಹಲಗಲಿ ಬೇಡರು | 3 |
| 4 | ವಚನ ಸೌರಭ | 3 |
| 5 | ಸಂಕಲ್ಪಗೀತೆ | 4 |
| 6 | ಕೌರವೇಂದ್ರನ ಕೊಂದೆ ನೀನು | 4 |
| 7 | ವೀರಲವ | 3 |
| 8 | ಸಾರ್ಥಕತೆ | 3 |
| | ಪದ್ಯ ಒಟ್ಟು | 28 |

### 3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು |
|---|---|---|
| 1 | ವಿಜ್ಞಾನ ಮತ್ತು ಸಮಾಜ | 2 |
| 2 | ನಾಮಫಲಕ | 2 |
| 3 | ಉದಾತ್ತ ಚಿಂತನೆಗಳು | 2 |
| 4 | ಪಾರಿವಾಳ | 1 |
| 5 | ಜನಪದ ಒಗಟುಗಳು | 2 |
| | ಪದ್ಯ ಒಟ್ಟು | 09 |

### 4.ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು |
|---|---|---|
| 1 | ಅಪಠಿತ ಗದ್ಯ | 04 |

### 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು |
|---|---|---|
| 1 | ವ್ಯಾಕರಣ | 14 |
| 2 | ಅಲಂಕಾರ | 03 |
| 3 | ಛಂದಸ್ಸು | 03 |
| 4 | ಗಾದೆ ವಿಸ್ತರಣೆ | 03 |
| 5 | ಪತ್ರಲೇಖನ | 05 |
| 6 | ಪ್ರಬಂಧ ಲೇಖನ | 05 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 33 |

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** **( ಒಂದು ಅಂಕದ 9 ಪ್ರಶ್ನೆಗಳಿರುತ್ತವೆ )**

**( ಸೂಚನೆ: ಪ್ರಶ್ನೆಗಳಿಗೆ ಉತ್ತರಗಳನ್ನು ಪದಗಳ ರೂಪದಲ್ಲಿ ನೀಡಲಾಗಿದೆ. ಮೊದಲು ಪದಗಳ ರೂಪದಲ್ಲಿನ ಉತ್ತರವನ್ನು ಅಭ್ಯಾಸ ಮಾಡಿ ನಂತರ ಪ್ರಶ್ನಾಭಾಗವನ್ನೆ ಬಳಸಿಕೊಂಡು ವಾಕ್ಯರೂಪದಲ್ಲಿ ಬರೆಯಲು ಪ್ರಯತ್ನಿಸುವುದು)**

1. ಶ್ರೀ ರಾಮನ ತಂದೆಯ ಹೆಸರೇನು?

   ದಶರಥ.

2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?

   ಪರಿಮಳದ ಹೂವು, ರುಚಿಕರ ಹಣ್ಣುಹಂಪಲುಗಳು ಮತ್ತು ಮಧುಪರ್ಕ

3. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?

   ಶಬರಿ.

4. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?

   (ಧನು) ಕಬಂಧ ಎಂಬ ಹೆಸರಿನ ರಾಕ್ಷಸ.

5. ಶಬರಿ ಗೀತನಾಟಕದ ಕರ್ತೃ ಯಾರು?

   ಪು.ತಿ. ನರಸಿಂಹಾಚಾರ್ಯ.

6. ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಿಳಿದುಕೊಂಡಿರುವ ಅಂಶಗಳಾವುವು?

   ಯಾಂತ್ರೀಕರಣ, ವಿದ್ಯುದೀಕರಣ, ಔದ್ಯೋಗೀಕರಣ, ಅಣುಶಕ್ತಿ ಇವುಗಳಿಂದ ಆಗುವ ಉಪಯೋಗ, ಬಳಸುವ ವಿಧಾನ ಹಾಗೂ ಹಾನಿಗಳ ಬಗ್ಗೆ

7. ಅಮೆರಿಕ, ಕೆನಡಾ ದೇಶಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಏಕೆ? **(2016 ಜೂನ್)**

   ಮನೆಗಳನ್ನು ಸಾಧಾರಣವಾಗಿ ಮರದಿಂದಲೇ ಕಟ್ಟಿರುತ್ತಾರೆ.

8. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸ್ಕೂಲಿನತ್ತ ಹೆಜ್ಜೆ ಹಾಕಲು ಕಾರಣವೇನು?

   ಕೊಂಬಿನ ಸದ್ದನ್ನು ನಿಲ್ಲಿಸಲು ಯಾರನ್ನಾದರೂ ಕರೆಯುವ ಉದ್ದೇಶದಿಂದ

9. ಅಮೆರಿಕದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯ ಭಾಗಗಳಾವುವು? **(2016 ಮಾರ್ಚ್)**

   ಜಾನಪದ ಹಾಸ್ಯ ಕಥೆಗಳು, ಗಾದೆಗಳು ಮತ್ತು ಪಂಚತಂತ್ರದ ಕಥೆಗಳು

10. ಶಾಲೆಗೆ ಹೋದ ಕೆಲಸದ ಬಗ್ಗೆ ಗೊರೂರರಿಗೆ ಯಾವಾಗ ಜ್ಞಾನೋದಯವಾಯಿತು?

    ಅವರ ಹೆಂಡತಿ ಶಾಲೆಯ ಬಾಗಿಲಿನಿಂದ ಒಳಗೆ ಬಂದು, ಅವರ ಮುಂದೆ ನಿಂತಾಗ

11. ಜೀವನದಲ್ಲಿ ಯಾವುದಕ್ಕೆ ಹೆಚ್ಚಿನ ಸ್ಥಾನವಿದೆ?

    ನಮ್ಮ ಜೀವನದಲ್ಲಿ ಅನ್ಯರ ದೃಷ್ಟಿಕೋನಕ್ಕೂ
    ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿಕೋನಕ್ಕೂ

12. ಅಂತರ್‌ಜೀವಿಗೆ ಯಾವುದು ದೊಡ್ಡ ಸಮಸ್ಯೆಯಾಗುತ್ತದೆ?

    ಅಂತರ್‌ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು.

13. ಅಂತರ್ಜೀವಿಯ ಶಕ್ತಿ ಹೇಗೆ ವೆಚ್ಚವಾಗುತ್ತಿರುತ್ತದೆ?

ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ

14. ಧರ್ಮಗಳು ಹಾಕಿಕೊಟ್ಟಿರುವ ರತ್ನಪಾತ ಏನು? (2016 ಮಾರ್ಚ್)

ಸಾಧಕನಿಗೆ, ಅಂತರ್ಜೀವಿಗೆ ಯಾವತೊಂದರೆಯೂಆಗಬಾರದೆಂದು ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂಬುದು

15. ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು?

ಅರಣ್ಯಕ ಮುನಿ

16. ಬುಕ್ಕರಾಯನ ಹಿರಿಮೆ ಏನು?

ಅರಿರಾಯ ವಿಭಾಡ ಹಾಗೂ ಭಾಷೆಗೆ ತಪ್ಪುವ ರಾಯರ ಗಂಡ ಎಂಬುದು ಬುಕ್ಕರಾಯನ ಹಿರಿಮೆ.

17. ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು?

ಜೈನರಿಗೂ ಭಕ್ತರಿಗೂ

18. ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹ ಮಾಡಿದರು?

ಭಕ್ತರು ಮಾಡುವ ಅನ್ಯಾಯಗಳನ್ನು

19. ಶ್ರೀವೈಷ್ಣವರೊಡನೆ ಮಹಾರಾಜನು ಏನು ಹೇಳಿದನು?

ವೈಷ್ಣವ ದರ್ಶನಕ್ಕೂ ಜೈನದರ್ಶನಕ್ಕೂ ಭೇದವಿಲ್ಲ

20. ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು?

ಅವನು ರಾಜದ್ರೋಹಿ ಎನಿಸುವನು.

21. ವಿಶ್ವೇಶ್ವರಯ್ಯನವರ ಪೂರ್ವಜರು ಎಲ್ಲಿಯವರು?

ಆಂಧ್ರದ ಕರ್ನೂಲು ಜಿಲ್ಲೆಯ ಗಿಡ್ಡಲೂರು ತಾಲೂಕಿನ 'ಮೋಕ್ಷಗುಂಡಂ' ಎಂಬ ಅಗ್ರಹಾರದವರು.

22. ವೆಂಕಟಲಕ್ಷ್ಮಮ್ಮ ಅವರು ತಮ್ಮ ಕುಟುಂಬವನ್ನು ಚಿಕ್ಕಬಳ್ಳಾಪುರಕ್ಕೆ ಸ್ಥಳಾಂತರಿಸಿದ್ದು ಏಕೆ?

ಮಕ್ಕಳು ಹೆಚ್ಚು ಓದಿ ದೊಡ್ಡ ವ್ಯಕ್ತಿಗಳಾಗಬೇಕೆಂಬ ಹಂಬಲದಿಂದ

23. ಬ್ರಿಟೀಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?

'ಸರ್' ಪದವಿ

24. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು? (2016 ಜೂನ್)

ನಾಲ್ವಡಿ ಕೃಷ್ಣರಾಜ ಒಡೆಯರು

25. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ? (2016 ಮಾರ್ಚ್)

'ಎಂಜನಿಯರ್ಸ್ ದಿನಾಚರಣೆ'

26. ಮನೆ ಮಂಚಮ್ಮ ಯಾರು? (2016 ಜೂನ್)

ಗ್ರಾಮದೇವತೆ

27. ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು?

ಸಿದ್ಧಲಿಂಗಯ್ಯ.

28. 'ಮಲೆಗಳಲ್ಲಿ ಮದುಮಗಳು' ಯಾರು ಬರೆದ ಕಾದಂಬರಿ?

ಕುವೆಂಪು

29. ಅಶೋಕ ಪೈ ಅವರ ವೃತ್ತಿ ಯಾವುದು?

ಮನೋವೈದ್ಯರು.

30. ದೇವನೂರರ 'ನನ್ನ ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ. (2016 ಮಾರ್ಚ್)

ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ದೇವರು

31. 'ವೃಕ್ಷಸಾಕ್ಷಿ' ಕತೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ?

'ಕರ್ನಾಟಕ ಪಂಚತಂತ್ರ'

32. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು? (2016 ಜೂನ್) (2016 ಮಾರ್ಚ್)

ಹೊನ್ನಿನ ಕಳ್ಳತನ

33. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?

"ಆಲದ ಮರವೇ ಸಾಕ್ಷಿ" ಎಂದು ಹೇಳಿದ್ದನ್ನು ಕೇಳಿ

34. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?

ದೇವರು, ಗುರುಗಳು, ವೇದಾಧ್ಯಯನ ನಿರತರನ್ನು ಪೂಜೆ ಮಾಡುತ್ತ ಕಳೆದನು.

35. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?

ವೃಕ್ಷಸಾಕ್ಷಿಯನ್ನು ಕೇಳಲು

ದುಷ್ಟಬುದ್ಧಿಯು ಮತ್ತು ಧರ್ಮಬುದ್ಧಿಯ ನಡುವಿನ ವ್ಯಾಜ್ಯವನ್ನು ಪರಿಹರಿಸಲು,

36. ಭಗವದ್ಗೀತೆಯನ್ನು ರಚಿಸಿದವರು ಯಾರು?

ವೇದವ್ಯಾಸರು.

37. ಹುಲಿಗೆ ಪರಮಾನಂದವಾಗಲು ಕಾರಣವೇನು? (2016 ಜೂನ್)

ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ

38. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?

ಹುಲಿಗೆ ತಮ್ಮ ಮುಖದರ್ಶನವಾಗದಂತೆ ತಪ್ಪಿಸಿಕೊಳ್ಳುವ ದೊಂಬರಾಟದಲ್ಲಿ ಶಾನುಭೋಗರಿಗೆ ತಲೆ ಸುತ್ತಲಾರಂಭಿಸಿತು.

39. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?

ಖಿರ್ದಿ ಪುಸ್ತಕ

40. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?

ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು.

41. ಭೀಮನಿಗೆ ಪವನನಂದನನೆಂದು ಹೆಸರು ಬರಲು ಕಾರಣವೇನು?

ವಾಯುವಿನ ವರಬಲದಿಂದ ಕುಂತಿಯಲ್ಲಿ ಜನಿಸಿದ್ದರಿಂದ

42. ಘಟ ಸಂಭೂತ ಯಾರು? (2016 ಮಾರ್ಚ್)

ದ್ರೋಣಾಚಾರ್ಯ.

43. ಗಾಂಡೀವಿ ಎಂದು ಅರ್ಜುನನನ್ನು ಏಕೆ ಕರೆಯುತ್ತಾರೆ?

ಗಾಂಡೀವ ಎಂಬ ಬಿಲ್ಲನ್ನು ಹೊಂದಿರುವುದರಿಂದ

44. ಪಂಪ ಭಾರತದ ಇನ್ನೊಂದು ಹೆಸರೇನು?

'ವಿಕ್ರಮಾರ್ಜುನ ವಿಜಯ'.

45. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?

ಎವೆ ತೆರೆದಿಕ್ಕುವ ಹೊತ್ತಿನೊಳಗೆ ಗಾವುದ ಗಾವುದ ಗಾವುದ ಮುಂದೆ ಹಾರುತ್ತಿದೆ.

46. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?

ಕರಿ, ಬಿಳಿ ಕೆಂಪು, ಹೊನ್ನಿನ ಹೊಳೆಯುವ ಬಣ್ಣಗಳಿವೆ.

47. ಹಕ್ಕಿಯು ಕಣ್ಣುಗಳು ಯಾವುವು?

ಸೂರ್ಯ ಚಂದ್ರರು

48. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?

ಸಾರ್ವಭೌಮರ ನೆತ್ತಿ

49. ಹಕ್ಕಿ ಯಾರನ್ನು ಹರಸಿದೆ?

ಹೊಸಗಾಲದ ಹಸುಮಕ್ಕಳನ್ನು

50. ಹಕ್ಕಿಯು ಯಾವುದರ ಸಂಕೇತವಾಗಿದೆ?

ಕಾಲಪಕ್ಷಿಯ

51. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು?

1) ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ.

2) ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಿಬೇಕು

52. ಹಲಗಲಿಯ ನಾಲ್ವರು ಪ್ರಮುಖರು ಯಾರು? (2016 ಮಾರ್ಚ್)

ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ

53 ಹಲಗಲಿಯ ಗುರುತು ಉಳಿಯದಂತಾದದು ಏಕೆ?

ಹಲಗಲಿಯ ಮೇಲೆ ಬ್ರಿಟೀಷ್ ಸರ್ಕಾರದ ದಂಡು ದಾಳಿ ಮಾಡಿ, ಬೆಂಕಿ ಹಚ್ಚಿದ್ದರಿಂದ

54. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?

ಹಲಗಲಿಯ ಬೇಡರ ಹತಾರ ಕದನ

55. ಹಲಗಲಿ ಗ್ರಾಮ ಎಲ್ಲಿದೆ?

ಹಲಗಲಿ ಮುಧೋಳ ಸಂಸ್ಥಾನದಲ್ಲಿ

56. ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ?

ಸತಿಪತಿಗಳು ಒಂದಾದ ಭಕ್ತಿ

57. ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಸಹ ಏನೆನಿಸುತ್ತದೆ? (2016 ಮಾರ್ಚ್)

ಪಟ್ಟಣ

58) ವಚನಕಾರರು ಯಾವುದನ್ನು ಮರನೇರಿದ ಮರ್ಕಟ ಎಂದಿದ್ದಾರೆ ? (2016 ಮಾರ್ಚ್)

ಚಂಚಲವಾದ ಮನಸ್ಸು

59. ಮಾನವನ ಸ್ವಭಾವವನ್ನು ವಚನಕಾರರು ಯಾವುದಕ್ಕೆ ಹೋಲಿಸಿದ್ದಾರೆ?

ಅಂದಣವನ್ನು ಏರಿದ ಸೊಣಗ(ನಾಯಿ)ಕ್ಕೆ

60. ಕೂಡಲ ಸಂಗಮದೇವ ಯಾವಾಗ ಒಲಿಯುವುದಿಲ್ಲ?

ನುಡಿಗೆ ತಕ್ಕ ನಡೆ ಇಲ್ಲದಿದ್ದರೆ

61. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು?

ಬಿರುಗಾಳಿಗೆ ಹೊಯ್ದಾಡುವ ಹಡಗನ್ನು

62. ನದೀಜಲಗಳು ಏನಾಗಿವೆ?

ಕಲುಷಿತವಾಗಿವೆ.

63. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?

ಕಲುಷಿತವಾಗಿರುವ ನದೀಜಲಗಳಿಗೆ

64. ಕಾಡುಮೇಡುಗಳ ಸ್ಥಿತಿ ಹೇಗಿದೆ?

ಬರಡಾಗಿವೆ.

65. ಯಾವ ಎಚ್ಚರದೊಳು ಬದುಕಬೇಕಿದೆ?

ಮತಗಳೆಲ್ಲವೂ ಪಥಗಳು ಎನ್ನುವ

66. ಶ್ರೀಕೃಷ್ಣ ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?

ಮೈದುನತನದ ಸರಸವನ್ನು ಮಾಡಿ, ಕೈಹಿಡಿದು ಎಳೆದು

67. ಕುಮಾರ ವ್ಯಾಸನ ಆರಾಧ್ಯ ದೈವ ಯಾರು?

ಗದುಗಿನ ವೀರನಾರಾಯಣ.

68. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು?

ನಕುಲ ಮತ್ತು ಸಹದೇವ.

69) ನಕುಲ ಸಹದೇವರ ತಾಯಿಯ ಹೆಸರೇನು ? (2016 ಜೂನ್)

ಮಾದ್ರಿ

70. ಕುಮಾರವ್ಯಾಸನಿಗೆ ಇರುವ ಬಿರುದು ಯಾವುದು?

'ರೂಪಕ ಸಾಮ್ರಾಜ್ಯ ಚಕ್ರವರ್ತಿ'

71. ನಾರಣಪ್ಪನಿಗೆ ಕುಮಾರವ್ಯಾಸ ಎಂಬ ಹೆಸರು ಏಕೆ ಬಂತು?

ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ ರಚಿಸಿದ್ದರಿಂದ

72. 'ಜೈಮಿನಿ ಭಾರತ' ಕಾವ್ಯವನ್ನು ಬರೆದ ಕವಿ ಯಾರು?

ಲಕ್ಷ್ಮೀಶ

73. ಯಜ್ಞಾಶ್ವವನ್ನು ಕಟ್ಟಿದವರು ಯಾರು?

ಲವ

74. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?

ಉತ್ತರೀಯದಿಂದ

75. ಮುನಿಸುತರು ಹೆದರಲು ಕಾರಣವೇನು?

ಲವನು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದರಿಂದ

76. ಮಣ್ಣಿನ ಮಾಲೀಕ ಯಾರು?

ಮಾನವ.

77. ಮಾನವ ಗಡಿಯನ್ನು ಹೇಗೆ ನಿರ್ಮಿಸಿಕೊಂಡ?

ಮಣ್ಣಿನ ಮಾಲೀಕ ಆದೆನೆಂಬ ಮತ್ತಿನಲ್ಲಿ ಭೂಮಿಯ ಮೇಲೆ ಗೆರೆ ಎಳೆದು

78. ಮಾನವನ ಕಾದಾಟಕ್ಕೆ ಕಾರಣವೇನು? (2016 ಜೂನ್)

ಹಮ್ಮು (ಗರ್ವ)

79. ಅಜ್ಞಾನ ತೊಲಗಿಸಲು ಕವಯತ್ರಿ ಏನಾಗ ಬಯಸಿದ್ದಾರೆ ?

ವಾಗ್ದೇವಿಯ ಕೈಯಲ್ಲಿನ ಗ್ರಂಥ

80. ಸದಾ ಚಿಮ್ಮುವ ಚಿಲುಮೆಯಾಗ ಬೇಕು ಏಕೆ ?

ದಾಹಗೊಂಡವರ ತನುವ ತಣಿಸಲು

81. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು ? (2016 ಮಾರ್ಚ್)

ದಟ್ಟ ಕಾಡಿನ ಹೆಮ್ಮರದ ಹೊದರಿನಲ್ಲಿ (ಪೊಟರೆ)

82. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು ?

ಒಂದನ್ನೊಂದು ಅಗಲದಂತೆ

83. ಪಾರಿವಾಳಗಳ ಆನಂದಕ್ಕೆ ಕಾರಣವೇನು ? (2016 ಜೂನ್)

ಮುದ್ದು ಮರಿಗಳ ಸದ್ದನ್ನು ಕೇಳಿ

## ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು(2 ಅಂಕದ 10 ಪ್ರಶ್ನೆಗಳಿರುತ್ತವೆ.)

1. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?

"ಗಿರಿವನಗಳೇ ನಾನು ನಿಮ್ಮನ್ನು ಬೇಡಿಕೊಳ್ಳುವೆನು. ಹೇಳಿರಿ ಪ್ರೀತಿಯ ರಾಣಿ ಸೀತೆಯು ನನಗೆ ದೊರೆಯುವಳೇ? ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ? ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ"

2. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ತಿಳಿಸಿ.

"ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು ? "

3. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

ಸವಿಯಾದ ಬಗೆಬಗೆಯ ಹಣ್ಣುಗಳನ್ನು, ಮಧುಪರ್ಕವೆಂಬ ಪಾನೀಯವನ್ನು, ಸುವಾಸನೆಯಿಂದ ಕೂಡಿದ ಹೂವುಗಳನ್ನು ಸಂಗ್ರಹಿಸಿ ಸಿದ್ಧಮಾಡಿಕೊಂಡಿದ್ದಳು.

4. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.

ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಕಣ್ಣಿಗೊತ್ತಿಕೊಂಡಳು. ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಟ್ಟಳು. ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

5. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದಳು?

"ನಾವು ನಿನ್ನ ಪ್ರೀತಿಯ ಸ್ವಾಗತದಿಂದ ಸಂತಸಗೊಂಡೆವು. ನಿನ್ನ ಸುಖದಲ್ಲಿ ನಮ್ಮ ಸುಖ ಕಂಡೆವು. ಕಣ್ಣಿಗೆ ಕಾಣದ ಆನಂದವನ್ನು ಅನುಭವಿಸುವ ಪುಣ್ಯ ನಮ್ಮದಾಯಿತು. ನಾವು ನಿನಗೆ ಎಂದೆಂದಿಗೂ ಋಣಿಗಳು"

6. ವಿದ್ಯಾರ್ಥಿಗಳು ಗೊರೂರರನ್ನು ಕಂಡು ಭಯಗೊಳ್ಳಲು ಕಾರಣವೇನು?

ಖಾದಿ ಕಚ್ಚೆ ಪಂಚೆ, ಕಾವಿ ಬಣ್ಣದ ಜುಬ್ಬ, ಕೆಂಪು ಉಣ್ಣೆಯ ಶಾಲು, ಕೊರಳಿನಲ್ಲಿದ್ದ ಮಫ್ಲರ್, ಹಣೆಯಲ್ಲಿನ ಕೆಂಪು ನಾಮ, ತಲೆಯ ಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು, ಬಿಳಿಗಡ್ಡ, ಮೀಸೆ, ಕಾಲಿಗೆ ದಪ್ಪನಾದ ಎಕ್ಕಡ ಇವುಗಳನ್ನೆಲ್ಲ ಧರಿಸಿದ್ದ ಗೊರೂರರನ್ನು ಕಂಡು ವಿದ್ಯಾರ್ಥಿಗಳು ಭಯಗೊಂಡರು.

7. ಶಾಲೆಗೆ ಹೋದ ಉದ್ದೇಶವನ್ನು ಗೊರೂರರು ಮರೆತದ್ದು ಏಕೆ ?

ಉಪಾಧ್ಯಾಯರು ಗೊರೂರರ ಉಡುಪಿನ ಬಗ್ಗೆ ವಿಚಾರಿಸಿದರು .ಅವರೊಡನೆ ಗೊರೂರರು ತಮ್ಮ ಉಡುಪಿನ ಬಗ್ಗೆ ಮಾತನಾಡಲು ತೊಡಗಿದರು. ಈ ಅವಾಂತರದಲ್ಲಿ ಗೊರೂರರು ಶಾಲೆಗೆ ಬಂದ ಉದ್ದೇಶವನ್ನೇ ಮರೆತುಬಿಟ್ಟರು.

8. ಗೊರೂರು ರಾಮಸ್ವಾಮಿ ಅಯ್ಯಂಗಾರರು ಇದ್ದ ಮನೆಯಲ್ಲಿ ಬೆಂಕಿ ಹೊತ್ತಿಕೊಂಡೀತೆಂದು ಆತಂಕ ಪಟ್ಟದ್ದು ಏಕೆ?

ವಿದ್ಯುತ್ ಒಲೆಯಿಂದ ಕೊಂಬಿನ ಸದ್ದು ಒಂದೇ ಸಮನಾಗಿ ಬರುತ್ತಿತ್ತು. ವಿದ್ಯುತ್ ಒಲೆಗಳ ಸ್ವಿಚ್ ಜೋಡಣೆ ಹೊಸ ತರಹದಾಗಿದ್ದು. "ಯಾವುದನ್ನು ಮುಟ್ಟಿದರೆ ಏನೋ" ಎಂಬ ಭಯದಿಂದ "ಮನೆಯಲ್ಲಿ ಬೆಂಕಿ ಹೊತ್ತಿ ಕೊಂಡೀತು" ಎಂಬ ಆತಂಕವನ್ನು ಉಂಟುಮಾಡಿತ್ತು.

9. ಅಂತರ್‌ಜೀವಿಗೆ ಸುಲಭವಾಗಿ ರಕ್ತಗತವಾಗದ ಸಂಗತಿ ಯಾವುದು?

ಅಂತರ್‌ಜೀವಿ ತನ್ನ ಯೋಗಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಹೊರಟ ಅವನಿಗೆ ಉಳಿದವರ ಯೋಗಕ್ಷೇಮವನ್ನು ಹೊರುವ ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು ಸುಲಭವಾಗಿ ರಕ್ತಗತವಾಗುವುದಿಲ್ಲ.

10. ಕಲೋಪಾಸಕನ ಕರ್ತವ್ಯ ಏನು?

1) ಪರಾಂತಃಕರಣ ಪ್ರವೇಶಿಯಾಗಿ ಜನತೆಯ ಮನವನ್ನೂ, ಅಂತಃಕರಣವನ್ನೂ ಅವನು ತಿದ್ದಬಹುದು.

2) ಉಳಿದವರ ಹಿತಚಿಂತನೆ ಹಾಗೂ ಹಿತಸಾಧನೆಯಲ್ಲಿ ತೊಡಗುವುದು

11. ಸಾಧಕನ ಯೋಗಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸುತ್ತಿತ್ತು?

1) ಸಾಧಕನಿಗೆ ಯಾವ ತೊಂದರೆಯೂ ಆಗಬಾರದೆಂದು, ಅವನನ್ನು ಸಮಾಜವೇ ನೋಡಿಕೊಳ್ಳಬೇಕಿತ್ತು

2) ಧರ್ಮಶಾಲೆಗಳಲ್ಲಿ, ವಿಹಾರಗಳಲ್ಲಿ, ಅನ್ನಛತ್ರಗಳಲ್ಲಿ ದೇವಸ್ಥಾನಗಳಲ್ಲಿ ಹಾಗೂ ಮಠಗಳಲ್ಲಿ ಉಚಿತ ವ್ಯವಸ್ಥೆಯನ್ನು ಏರ್ಪಡಿಸಲಾಗುತ್ತಿತ್ತು.

12. ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳಾವುವು? (2016 ಮಾರ್ಚ್)

1) ತನ್ನಿಂದ ಹೆರವರಿಗೆ ಯಾವ ತೊಂದರೆಯೂ ಮಾನಸಿಕ ವ್ಯಥೆಯೂ ಆಗದಂತೆ ಎಚ್ಚರಪಡುವ ಕಣ್ಣು

2) ತನ್ನ ಅಳವಿನಲ್ಲಿ ಹೆರವರ ಐಹಿಕ, ಮಾನಸಿಕ ಇಲ್ಲವೆ ಆತ್ಮಿಕ ಹಿತಚಿಂತನೆ ಎಲ್ಲೆಲ್ಲಿ ಸಾಧ್ಯ ಎಂದು ಸದಾ ಅಭ್ಯಸಿಸುವ ಕಣ್ಣು.

13. 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ?

1) ನಾಸ್ತಿಕರಿಗೆ ಮಹಾಬಡಬಾ ಮುಖಾಗ್ನಿಯಂತಿರುವವರು.

2) ಶ್ರೀರಂಗರಾಜ ಪಾದಕಮಲಗಳಲ್ಲಿ ಮೂಲ ದಾಸರಾದವರು.

3) ಶ್ರೀವಿಷ್ಣುಲೋಕ ಮುನಿಮಂಟಪ ಮಾರ್ಗದಾಯಿಗಳು.

4) ಯತಿರಾಜರಾಜರಂತಿರುವವರು.

14. ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು?

ಕೋವಿಲ್, ತಿರುಮಲೆ, ಪೆರುಮಾಳ್‌ಕೋವಿಲ್, ತಿರು ನಾರಾಯಣಪುರ ಮುಖ್ಯ ಕ್ಷೇತ್ರಗಳ ಸಕಲಾಚಾರ್ಯರು, ಸಕಲಧರ್ಮಾನುಯಾಯಿಗಳು, ಸಕಲ ಸಾತ್ವಿಕರು, ಮೋಷ್ಟಿಕರು, ತಿರುಪಣಿ, ತಿರುವಿಡಿ, ತಣ್ಣೀರವರು, ಇತ್ಯಾದಿ

15 . ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು?

1) ಬೆಳುಗೊಳದ ಪುಣ್ಯಕ್ಷೇತ್ರದಲ್ಲಿ ವೈಷ್ಣವ ಅಂಗರಕ್ಷರನ್ನು ನೇಮಿಸುವುದು.

2) ಸಮಸ್ತ ರಾಜ್ಯದೊಳಗೆ ಇರುವಂತಹ ಜೈನರ ಬಾಗಿಲು ಕಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ಒಂದು ಹಣ ಕೊಡುವುದು.

3) ಸಂಗ್ರಹಿಸಿದ ಹಣದಿಂದ ದೇವರ ಅಂಗರಕ್ಷೆಗೆ ಇಪ್ಪತ್ತು ಆಳುಗಳನ್ನು ಇಡಬೇಕು.

4) ಉಳಿದ ಹೊನ್ನಿನಿಂದ ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿಸುವುದು.

16. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?

"ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು.ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು"

17. ನೆಹರೂ ಅವರು ಸರ್. ಎಂ.ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?

" ದುರಾದೃಷ್ಟಾವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ ; ಹೆಚ್ಚು ಕೆಲಸ ಮಾಡಿದ್ದೀರಿ.ಅದನ್ನು ನಾವು ತಮ್ಮಿಂದ ಕಲಿಯೋಣ"

18. ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಸೇವೆ ಯಾವುದು? (2016 ಮಾರ್ಚ್)

1) ಈಸಿ ಮತ್ತು ಮೂಸಿ ನದಿಗಳಿಗೆ ಪ್ರತ್ಯೇಕ ಜಲಾಶಯ ನಿರ್ಮಿಸಿದರು.

2) ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು.

19. ಎಂಜಿನಿಯರ್‌ಗಳಿಗೆ ವಿಶ್ವೇಶ್ವರಯ್ಯ ಅವರು ಏನೆಂದು ಮಾರ್ಗದರ್ಶನ ಮಾಡಿದರು?

1) "ನಮ್ಮ ಕೆಲಸಗಳು ಪ್ರಮಾಣದಲ್ಲಿ ಚಿಕ್ಕದಿರಬಹುದು, ಆದರೆ ಪ್ರಪಂಚದಾದ್ಯಂತ ಯಾವುದೇ ವರ್ಗದ ಕಾಮಗಾರಿಯ ಎಂಜಿನಿಯರಿಂಗ್ ಗುಣಲಕ್ಷಣಗಳು ಒಂದೇ ಆಗಿರುತ್ತವೆ.

2) ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜಿನಿಯರ್ ಪಡೆಯುವಷ್ಟು ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು.

3) ಮಾಹಿತಿಗಳಲ್ಲಾಗಲಿ, ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ.

20. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?

1) ಕ್ರಿ.ಶ. 1913ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು.

2) ಕೈಗಾರಿಕೆಗಳ ಅಭಿವೃದ್ಧಿಗೆ ಫೇಡರ್ ಬ್ಯಾಂಕ್ ರಚಿಸಿದರು.

3) ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳನ್ನು ರಚಿಸಿದರು

4) ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು.

5) ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು.

21) ವಿಶ್ವೇಶ್ವರಯ್ಯನವರು ರಚಿಸಿದ ಸಾಹಿತ್ಯ ಕೃತಿಗಳಾವುವು ? (2016 ಜೂನ್)

1) ರಿಕನ್ ಸ್ಟ್ರಕ್ಟಿಂಗ್ ಇಂಡಿಯಾ 2) ಪ್ಲಾನ್ಡ್ ಎಕನಾಮಿ ಫಾರ್ ಇಂಡಿಯಾ

3) ಮೆಮೋರಿ ಆಫ್ ಮೈ ವರ್ಕಿಂಗ್ ಲೈಫ್‌ಮ 4) ನೇಷನ್ ಬಿಲ್ಡಿಂಗ್ ಫಾರ್ ಇಂಡಿಯಾ

22. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವೇನು?

ಕೆಲವು ಜನ ಒಂದು ಕೊಠಡಿಯಲ್ಲಿ ಕುಳಿತು ಟಿವಿ ನೋಡುತ್ತಿರುವಾಗ, ಇನ್ನೊಂದಿಷ್ಟು ಜನ ಇದರ ಅರಿವಿಲ್ಲದೆ ಇನ್ನೊಂದು ಪಕ್ಕದ ಕೊಠಡಿಯಲ್ಲಿ ಏನೋ ಮಾತುಕತೆ ಆಡುತ್ತ ಇರುವಾಗ, ಟಿವಿನಲ್ಲಿ ಯಾವುದಾದರೂ ಕೊಲೆ ದೃಶ್ಯ ಬಂದಾಗ ಇಲ್ಲಿ ಇದನ್ನು ನೋಡುತ್ತಿದ್ದವರ ದುಃಖದ ಭಾವನೆಯು ಇದನ್ನು ನೋಡದೆ ಇರುವ ಪಕ್ಕದ ಕೊಠಡಿಯಲ್ಲಿ ಇರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸು ಸ್ವಲ್ಪಮಟ್ಟಿಗೆ ದುಗುಡಗೊಳ್ಳುತ್ತದೆ. ಅದೇ ಟಿವಿನಲ್ಲಿ ಯಾವುದಾರೊಂದು ನೃತ್ಯ ದೃಶ್ಯ ಬಂದಾಗ ಅದನ್ನು ನೋಡುತ್ತಿರುವವರ ಖುಷಿ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದನ್ನು ನೋಡದೆ ಇದ್ದವರ ಮನಸ್ಸಿನ ಮೇಲೂ ಪರಿಣಾಮ ಬೀರಿ ಸ್ವಲ್ಪಮಟ್ಟಿಗೆ ಸಂತೋಷ ಭಾವನೆ ಉಂಟಾಗುತ್ತದೆ.ಇದು ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯ.

23. 'ವಚನಧರ್ಮ'ದ ಬಗೆಗೆ ದೇವನೂರರ ಅಭಿಪ್ರಾಯ ಏನು?

" ವಚನ ಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೆ ಇದು ಬೆಳಕಾಗಬಹುದು. ಇದು ಜಾತಿಯಾದರೆ ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ"

24. ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಏಂಥದ್ದು? (2016 ಮಾರ್ಚ್)

"ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟು ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸ. ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೇ ಕೂಡಿಸುತ್ತ ಕೂಡಿಸುತ್ತಾ ಹೋದವರು ಪರಮಹಂಸರು"

25. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು? (2016 ಜೂನ್)

'ಭೂಮಿಗೆ ಬಿದ್ದ ಬೀಜ
ಎದೆಗೆ ಬಿದ್ದ ಅಕ್ಷರ
ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾಗಿವೆ.

26. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು ? (2016 ಮಾರ್ಚ್) (2016 ಜೂನ್)

"ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸಂತೋಷದಿಂದ ಇರುವವರಲ್ಲ. ಮತ್ತೆ ವ್ಯಾಪಾರಕ್ಕೆ ಹೋಗಬೇಕಾಗುತ್ತದೆ. ಆದ್ದರಿಂದ ನಿನಗೂ ನನಗೂ ಖರ್ಚಿಗೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು, ಉಳಿದ ಹೊನ್ನೆಲ್ಲವನ್ನು ಈ ಮರದ ಅಡಿಯಲ್ಲಿ ಇಟ್ಟು ಬಿಡೋಣ" ಎಂದು ಸಲಹೆಯಿತ್ತನು.

27. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?

"ನಿನ್ನ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ, ಹಲವು ಕಾಲ ಹಸಿಯದೆ ಊಟಮಾಡಿ ಬಾಳುವಂತಹ ಸಾಧನೆಯನ್ನು ಮಾಡಬಹುದು. ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದನು.

28. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?

"ನೀನಾದರೋ ಯಕ್ಷಾದಿ ದಿವ್ಯ ದೇವತೆಗಳು ವಾಸ ಮಾಡುವಂತಹ ಮತ್ತು ಅವರ ಸೇವೆಯನ್ನು ಮಾಡುವಂತಹವನು ಆಗಿದ್ದೀಯಾ, ಆ ಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುತ್ತಿದ್ದೇವೆ, ನೀನು ತಪ್ಪದೆ ಸಾಕ್ಷಿಯನ್ನು ನುಡಿ" ಎಂದು ಹೇಳಿದರು.

29. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?

ಶಾನುಭೋಗರು ಮದಲಿಂಗನ ಕಣಿವೆಯ ಆ ಕಾಡುದಾರಿಯಲ್ಲಿ "ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು" ಎಂದು ಯೋಚಿಸಿದರು.

30. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು? (2016 ಜೂನ್)

ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ ಏಕೆಂದರೆ ಶತ್ರುಗಳಾದರೂ ಸರಿಯೆ, ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಆದ್ದರಿಂದ ಹುಲಿಯು ಶಾನುಭೋಗರ ಬೆನ್ನ ಹಿಂದಿನಿಂದ ಹಾರಿ ಕೊಲ್ಲಲಿಲ್ಲ.

31. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.

ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರ ಗಾಡಿಯ ಎತ್ತುಗಳು ಮುಂದೆ ಹೋಗದೆ ನಿಂತವು. ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಗಂಟೆಯ ಸದ್ದನ್ನು ಕೇಳಿದ ಹುಲಿಯು ಕೆಲವು ನಿಮಿಷ ತಡೆದು ರೈತರ ಮಾತುಕೇಳಿಬಂದ ಮೇಲೆ ನಿರಾಶೆಯಿಂದ ಪಲಾಯನಮಾಡಿತು. ಅನಂತರ ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾಹಾರಿಸಿ, ಗಲಭೆ ಮಾಡುತ್ತಾ ತೆಂಗಿನಗರಿಯ ಪಂಜು ಹೊತ್ತಿಸಿಕೊಂಡು ಮುಂದೆಬಂದರು. ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು, ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

32. ಸಂಧಿಯೇ ಉಚಿತವೆಂದು ಧೃತರಾಷ್ಟ್ರ ಹೇಗೆ ಸಮರ್ಥಿಸಿದನು?

1) ನನಗೂ ಪಾಂಡುವಿಗೂ ಭೇದವಿಲ್ಲ, ರಾಜ್ಯವನ್ನು ವಿಭಾಗ ಮಾಡಿ ಆಳೋಣ.
2) ಆ ಪಾಂಡುವಿನ ಮಕ್ಕಳೂ ನಿನ್ನಲ್ಲಿ ಸರಿಯಾಗಿ ಹೊಂದಿಕೊಳ್ಳುವರು.
3) ಈ ಯುದ್ಧವು ನಿನ್ನಿಂದ ಆಯಿತು ಎಂದರೆ ಇನ್ನು ಕೋಪಗೊಳ್ಳುತ್ತೀಯಾ.
4) ಭೀಷ್ಮನಿಗೆ, ದ್ರೋಣನಿಗೆ, ಕರ್ಣನಿಗೆ ಗೆಲ್ಲಲು ಅಸಾಧ್ಯನಾದ ಆ ಅರ್ಜುನ ಜೊತೆ ಯುದ್ಧ ಮಾಡುವವರು ಯಾರು ಸಂಧಿಯನ್ನು ಮಾಡೋಣ" ಎಂದು ಹೇಳಿದನು.

33. ದುರ್ಯೋಧನನಿಗೆ ಗಾಂಧಾರಿ ನೀಡಿದ ಉಪದೇಶವೇನು ?

1) ಕುರುವಂಶವೆಂಬ ತೋಟವು ಭೀಮನೆಂಬ ಮದದಿಂದ ಕುರುಡಾಗಿ ಸೊಕ್ಕೇರಿದ ಆನೆಯು ಕೋಪಿಸಿ ನುಗ್ಗಲು ಧ್ವಂಸವಾದಂತೆ ಆಯಿತು.
2) ಪುಣ್ಯದಿಂದ ಒಂದು ದೊಡ್ಡ ಮರವು ಉಳಿಯುವಂತೆ ನೀನು ಉಳಿದೆ, ಇನ್ನು ಯುದ್ಧ ಮಾಡುವಂಥವರೂ ಇಲ್ಲ; ಮಗನೇ, ಮುದುಕರೂ ಕುರುಡರೂ ಎಂದು ಹೇಳದೆ ನಮ್ಮ ಮಾತನ್ನು ಕೇಳು, ಆಲೋಚಿಸು, ತಂದೆಯ ಮಾತಿಗೆ ಒಪ್ಪಿಗೆ ಕೊಡು" ಎಂದು ಹೇಳುತ್ತಾಳೆ.

34. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?

1) ನೀಲಮೇಘಮಂಡಲ – ಸಮಬಣ್ಣವಾಗಿ ಮುಗಿಲಿಗೆ ರೆಕ್ಕೆಗಳು ಮೂಡಿ ಇಡೀ ಆಕಾಶವೇ ಹಾರಿದಂತೆ ಆಗುತ್ತದೆ ಎನ್ನುತ್ತಾರೆ.
2) ನಕ್ಷತ್ರ ಮಾಲೆಯನ್ನು ಧರಿಸಿಕೊಂಡು, ಸೂರ್ಯ ಚಂದ್ರರನ್ನು ಕಣ್ಣಾಗಿಸಿಕೊಂಡು ಹಕ್ಕಿಯು ಹಾರಾಡುತ್ತಿದೆ

35. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?

ಹಕ್ಕಿಯು ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ ಕಾರಣವಾಗಿದೆ.
ಹಕ್ಕಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿದೆ.
ಹೊಸಗಾಲದ ಹಸುಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಕವಿಗಳು ವರ್ಣಿಸುತ್ತಾರೆ.

36. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ? (2016 ಮಾರ್ಚ್)

1) ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ .
2) ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ಬ್ರಿಟೀಷರು ಹೊರಡಿಸಿದ್ದು ದಂಗೆ ಏಳಲು ಕಾರಣವಾಯಿತು.

37. ಹಲಗಲಿಗೆ ದಂಡು ಬರಲು ಕಾರಣವೇನು ?

ಹಲಗಲಿಯ ಬೇಡರು, ಬ್ರಿಟೀಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ಹಲಗಲಿಯ ಬೇಡರ ದಂಗೆಯನ್ನು ಬಗ್ಗುಬಡಿಯಲು ದಂಡನ್ನು ಕರೆಯಿಸಿದರು.

38. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು ?

ದಂಡು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು. ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಸಿಕ್ಕದ್ದನ್ನೆಲ್ಲ ಕೊಳ್ಳೆ ಹೊಡೆದುಕೊಂಡು ಹೋದರು.

39. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?

ಲಾವಣಿಗಳು ಸಾಮಾನ್ಯವಾಗಿ ವೀರತನ ಹಾಗೂ ಸಾಹಸವನ್ನು ವರ್ಣಿಸುವುದರಿಂದ ಅವುಗಳನ್ನು ವೀರಗೀತೆಗಳು ಎನ್ನುವರು.

40. ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರದಾಸಿಮಯ್ಯನ ಅಭಿಪ್ರಾಯವೇನು? (2016 ಜೂನ್)

1) ಸತಿಪತಿಯರು ಒಂದಾಗಿ ಸಲ್ಲಿಸುವ ಭಕ್ತಿ ಶಿವನಿಗೆ ಹಿತ. ಸತಿಪತಿಯರು ಒಂದಾಗಿ ಸಲ್ಲಿಸದ ಭಕ್ತಿ ಅಮೃತದಲ್ಲಿ ವಿಷ ಬೆರತಂತೆ.

2) ನಿಷ್ಠೆಯುಳ್ಳ ಭಕ್ತ ದಟ್ಟವಾದ ಕಾಡಿನಲ್ಲಿ ಇದ್ದರೂ ಅದು ಅವನಿಗೆ ಪಟ್ಟಣ ಎನಿಸುವುದು. ನಿಷ್ಠೆಯಿಲ್ಲದೆ ಭಕ್ತ ಪಟ್ಟಣವಾಸಿಯಾದರೂ ಅವನಿಗೆ ಅದು ದಟ್ಟಡವಿಯಾಗಿರುತ್ತದೆ.

41. ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಚಂಚಲ ಮನಸ್ಸು ಮತ್ತು ಸ್ವಭಾವಗಳನ್ನು ವಿವರಿಸಿ.

1) ಮರ್ಕಟದಂತೆ ಮನವು ಚಂಚಲವಾಗಿರುತ್ತದೆ. ಹೀಗಾದಾಗ ಮನಸ್ಸು ದೇವರೆಡೆಗೆ ತಿರುಗಲು ಸಾಧ್ಯವಿಲ್ಲ.

2) ಪಲ್ಲಕ್ಕಿಯನ್ನು ಏರಿದ ನಾಯಿ ಹೊಲಸು ಕಂಡಾಗ ತನ್ನ ಸ್ವಭಾವದಂತೆ ಆ ಕಡೆಗೆ ಓಡುತ್ತದೆ.

3) ಅದೇ ರೀತಿ ಚಂಚಲ ಮನಸ್ಸು ವಿಷಯ ಸುಖದ ಕಡೆಗೆ ವಾಲುತ್ತದೆ. ದೇವರನ್ನು ನೆನೆಯಲು ಬಿಡುವುದಿಲ್ಲ ಎಂದಿದ್ದಾರೆ.

42. ಮಾತಿನ ಮಹತ್ತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ? (2016 ಮಾರ್ಚ್)

ಮಾತು ಮುತ್ತಿನಹಾರದಂತೆ ಇರಬೇಕು.

ಮಾಣಿಕ್ಯದ ದೀಪ್ತಿಯಂತೆ ಜ್ಞಾನದ ಬೆಳಕನ್ನು ನೀಡಬೇಕು.

ಸ್ಫಟಿಕದ ಸಲಾಕೆಯಂತಿರಬೇಕು. ದೇವರು ಮೆಚ್ಚುವಂತೆ ಇರಬೇಕು.

ಅದೇರೀತಿ ನುಡಿಗೆ ತಕ್ಕ ನಡೆ ಇದ್ದರೆ ಮಾತ್ರ ದೇವರು ಒಲಿಯುವನು ಎನ್ನುತ್ತಾರೆ.

43. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?

ನಮ್ಮ ಬದುಕಿನ ಸುತ್ತಮುತ್ತಲು ಕವಿದಿರುವ ಕತ್ತಲೆಯನ್ನು ಕಳೆಯಲು ಪ್ರೀತಿಯೆಂಬ ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಜ್ಞಾನದೀವಿಗೆಯ ಮೂಲಕ ಎಚ್ಚರಿಕೆಯಿಂದ ಮುನ್ನಡೆಸಬೇಕಿದೆ.

44. ಕಾಡುಗಳಿಗೆ *ಹೇಗೆ* ಮುಟ್ಟಬೇಕಿದೆ?

ಮುಂಗಾರಿನ ಮಳೆಯಾದಾಗ ಪ್ರಕೃತಿ ಹಚ್ಚಹಸಿರಿನಿಂದ ಕಂಗೊಳಿಸುತ್ತಿದ್ದಂತೆ ವಸಂತನ ಆಗಮನದಿಂದ ಬರಡಾಗಿರುವ ಕಾಡಿನಲ್ಲಿ ಮರಗಿಡಗಳು ಚಿಗುರಿ ಪ್ರಕೃತಿಗೆ ನವಚೈತನ್ಯ ಮೂಡತ್ತದೆ.

45. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?

ಭಾಷೆ, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಅವುಗಳನ್ನು ಕೆಡವಬೇಕು. ಬದುಕಿನಲ್ಲಿ ಹೊಸ ಭರವಸೆಗಳನ್ನು ಮೂಡಿಸಿ ಮನುಜ ಮನುಜರ ನಡುವೆ ಸೇತುವೆಯಾಗಬೇಕಿದೆ.

46. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?

ಮತಗಲೆಲ್ಲವು ಪಥಗಳು ಎನ್ನುವ ಎಚ್ಚರಿಕೆಯಲ್ಲಿ ನಾವು ಬದುಕಬೇಕು. ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ, ಕನಸ್ಸನ್ನು ಬಿತ್ತುತ್ತ ಬದುಕು ನಡೆಸಬೇಕು.

47. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ (ಉ)ಭಯವನ್ನು ಬಿತ್ತಿದನು?

ಕೃಷ್ಣನು, "ಕರ್ಣ ಪಾಂಡವರಿಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನೀನು ನಿಜವಾಗಿ ಭೂಮಿಯ ಒಡೆಯ.ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳಿ (ಉ)ಭಯವನ್ನು ಬಿತ್ತಿದನು.

48. ಕುಂತಿ, ಮಾದ್ರಿಯರು ಯಾರ್‍ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?

ಕುಂತಿಯು ಯಮ , ವಾಯು , ಇಂದ್ರರ ಅನುಗ್ರಹದಿಂದ, ಮಾದ್ರಿಯು ಅಶ್ವಿನೀದೇವತೆಗಳ ಅನುಗ್ರಹದಿಂದ ಮಕ್ಕಳನ್ನು ಪಡೆದರು

49. ಕೃಷ್ಣನು ಆಮೀಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?

ಕೊರಳಸೆರೆ ಹಿಗ್ಗಿದವು, ಕಂಬನಿಯು ರಭಸವಾಗಿ ಹರಿದವು, ದುಃಖಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾದುದು" ಎಂದನು. ಹರಿಯ ಹಗೆತನವು ಸುಡುವುದು , ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು"ಎಂದುಕೊಂಡನು.

50. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?

ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು.ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದೆ" ಎಂದನು.

51. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?

ನಾಳಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು. ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರ ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು ಎಂಬ ತೀರ್ಮಾನವಾಗಿತ್ತು.

52. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.

ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯದೆ ಹೆದರಿ ನಮಸ್ಕರಿಸಿ ಯಜ್ಞಾಶ್ವವನ್ನು ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು.

53. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?

"ಭೂಮಂಡಲದಲ್ಲಿ ಕೌಸಲ್ಯೆಯು ಮಗನಾದರಾಮನು ಒಬ್ಬನೇ ವೀರನು ಇದು ಅವನ ಯಜ್ಞ ಕುದುರೆ ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರು ತಡೆಯಲಿ" ಎಂದು ಬರೆಯಲಾಗಿತ್ತು.

54. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

ಮುನಿಸುತರು "ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯುವರು" ಎಂದು ಹೇಳಿದರು.ಆಗ ಲವನು ನಗುತ "ಬ್ರಾಹ್ಮಣರ ಮಕ್ಕಳು ಹೆದರಿದರೆ. ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ" ಎಂದು ಶೌರ್ಯದಿಂದ ಹೇಳಿದನು.

55. ಗಡಿಯ ಆಚೆ–ಈಚೆ ಜೀವಿಗಳು ಏಕೆ ಶವವಾದವು? (2016 ಜೂನ್)

ಮಾನವನು ಭೂಮಿಯ ಮಾಲೀಕನಾದನೆಂಬ ಅಮಲಿನಲ್ಲಿ ಭೂಮಿಯ ಮೇಲೆ ಗೆರೆ ಎಳೆದು ಗಡಿಯನ್ನು ನಿರ್ಮಿಸಿಕೊಂಡನು. ಈ ಗಡಿ ನನ್ನದು ಎಂದು ಗರ್ವಪಟ್ಟು ಕಾದಾಟ (ಯುದ್ಧ) ಮಾಡಿದ್ದರಿಂದ ಜೀವಿಗಳು ಶವವಾದವು.

56. ನನ್ನಾಸೆ ಕವನದಲ್ಲಿ ಕವಯಿತ್ರಿ ಆಸೆಗಳೇನು ? ವಿವರಿಸಿ

ಬೆಳಕು ನೀಡುವ ಬತ್ತಿ ಆಗಬೇಕು, ಮರವಾಗಿ ಪುಣ್ಯವಂತರಿಗೆ ನೆರಳಾಗಬೇಕು, ಸದಾ ಚಿಮ್ಮುವ ಚಿಲುಮೆಯಾಗ ಬೇಕು, ಅಮ್ಮನ ಕಂಠದ ಜೋಗುಳ ಆಗಬೇಕು,ಸರಸ್ವತಿ ಕೈಯಲ್ಲಿನ ಪುಸ್ತಕ ಆಗಬೇಕು ಊರುಗೋಲು ಆಗಬೇಕು.

57. ವಿಜ್ಞಾನಿಗಳ ವೈರುಧ್ಯ ಭಾವನೆಯನ್ನು ವಿವರಿಸಿರಿ.

1) ವಿಜ್ಞಾನಿಗಳು ಪ್ರಯೋಗಶಾಲೆಗಳಲ್ಲಿ ತಮ್ಮ ಹೆಚ್ಚಿನ ವಿಚಾರಶಕ್ತಿಯನ್ನೂ, ವೈಜ್ಞಾನಿಕ ಮನೋಭಾವವನ್ನೂ ಪ್ರದರ್ಶಿಸುತ್ತಾರೆ.
2) ನಿಜಜೀವನದಲ್ಲಿ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ.
3) ಮನಸ್ಸು ಒಮ್ಮೆ ತಾರ್ಕಿಕವಾಗಿ ಚಿಂತಿಸಿದರೆ ಮತ್ತೊಮ್ಮೆ ಅತಾರ್ಕಿಕವಾಗಿ ಯೋಚಿಸುತ್ತದೆ.
4) ಯೋಚನೆಯಲ್ಲಿ ಏಕಸೂತ್ರತೆ ಕಂಡುಬರುವುದಿಲ್ಲ.

58. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ ? (2016 ಜೂನ್)

ವಿಜ್ಞಾನಿಯೊಬ್ಬನ ವಸ್ತು ಸ್ಥಿರತೆಯ ವಿಶ್ವ ನಿಯಮ ಸಮಾಜದ ಕೆಲವರಿಗೆ ಮಾತ್ರ ಅನ್ವಯಿಸುವುದಿಲ್ಲ ಎಂದರೆ ಅದು ಮೂರ್ಖತನ. ಶೂನ್ಯದಿಂದ ಏನನ್ನಾದರೂ ಸೃಷ್ಟಿಸಬಹುದೆಂದರೆ ಅದು ಮೂರ್ಖತನದ ಪರಮಾವಧಿ. ಅಶಿಕ್ಷಿತನೊಬ್ಬ ಹೀಗೆ ಹೇಳಿದರೆ ಕ್ಷಮೆಯುಂಟು ; ಆದರೆ ವಿದ್ಯಾವಂತ ಈ ರೀತಿ ಅಭಿಪ್ರಾಯವನ್ನು ತಿಳಿಸುವುದು ಶೋಚನೀಯ. ಇದು ನಿಜವಾದರೆ ಜಗತ್ತಿನ ವಿಜ್ಞಾನ ಕ್ಷೇತ್ರದಲ್ಲಿ ನಡೆದಿರುವ ಎಲ್ಲ ಶೋಧನೆಗಳು ಅರ್ಥರಹಿತವಾಗುತ್ತವೆ.

59. ಲೇಖಕರ ಪ್ರಕಾರ 'ವಿಶ್ವಧರ್ಮ' ಯಾವಾಗ ರೂಪಿತವಾಗಬಲ್ಲದು ?

ನಮ್ಮ ಸಮಾಜಎದುರಿಸುತ್ತಿರುವ ಜಾತಿಯಂತಹ ಸಾಮಾಜಿಕ ಪಿಡುಗುಗಳ ಪರಿಹಾರವನ್ನು ಸಹ ವೈಜ್ಞಾನಿಕ ಮನೋಭಾವಗಳಿಂದಲೇ ಮನೋಡಬೇಕು.ಆಗ ಮಾತ್ರ ವಿಶ್ವಧರ್ಮ ರೂಪಿತವಾಗ ಬಲ್ಲುದು."

60. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಲೇಖಕರು ವಿವರಿಸಿದ್ದಾರೆ ? (2016 ಮಾರ್ಚ್)

1) ವಿಜ್ಞಾನ ಮತ್ತದರ ಬಳಕೆ ಹಾಗೂ ವೈಜ್ಞಾನಿಕ ಮನೋಧರ್ಮವನ್ನು ಪಡೆದು ಕಾರ್ಯಪ್ರವೃತ್ತರಾದಾಗ ಮಾತ್ರ ಬಡತನ ನಿರ್ಮೂಲನ ಮತ್ತು ಶೋಷಣೆಗಳ ನಾಶ ಸಾಧ್ಯವಾಗುತ್ತದೆ.

2) ವಿಜ್ಞಾನಿಗಳು ವಿಜ್ಞಾನದಲ್ಲಿ ಜೀವಂತ ನಂಬಿಕೆ ಹೊಂದಬೇಕು.ಅಂತೆಯೇ ತರ್ಕಬದ್ಧರಾಗಿ ಧೈರ್ಯದಿಂದ ವರ್ತಿಸಬೇಕು ಆಗ ಸಮಾಜದ ಸುಧಾರಣೆ ಆಗುತ್ತದೆ.

61. ಪಂಪನು ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ?

1) ತನ್ನ ಕೃತಿಗಳ ಮಹತ್ತ್ವದಿಂದ ಶತಮಾನಗಳ ಕಾಲ ಉಳಿಯುತ್ತದೆ ಎಂಬ ನಂಬಿಕೆಯಿತ್ತು.

2) ದಿಗ್ವಿಜಯವನ್ನು ವೃಷಭಾಚಲದಲ್ಲಿ ಬರೆಸಲು ಹೋದ ಭರತನ ಗರ್ವಭಂಗವಾದ್ದನ್ನು ಪಂಪನೇ ತನ್ನ ಆದಿಪುರಾಣದಲ್ಲಿ ನಿರೂಪಿಸಿದ್ದನು. ಈ ಕಾರಣಗಳಿಂದ ಪಂಪನು ತನ್ನ ಹೆಸರನ್ನು ಕೆತ್ತಿಸಲಿಲ್ಲ.

62. ಭರತಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ? (2016 ಮಾರ್ಚ್) (2016 ಜೂನ್)

1) ವೃಷಭಾಚಲದಲ್ಲಿ ಹಿಂದಿನ ಅನೇಕ ಚಕ್ರವರ್ತಿಗಳು ಬರೆಸಿದ ಆತ್ಮಪ್ರಶಂಸೆಗಳು ತುಂಬಿಹೋಗಿದ್ದವು.

2) ಭರತಚಕ್ರವರ್ತಿಗೆ ತನ್ನಹೆಸರು ಬರೆಸಲು ಸೂಕ್ತವಾದ ಸ್ಥಳ ದೊರಕಲಿಲ್ಲ .

63. ಕ್ರಿಯಾ ಸ್ವಾತಂತ್ರ್ಯ ಎಂದರೇನು ?

ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು. ತನ್ನ ಕೆಲಸದ ಫಲವಾಗಿ ತನ್ನ ಕೆಲಸ,ಮನೆ,ಆಹಾರ ಕಳೆದುಕೊಂಡುಬಿಡುವ ಭೀತಿ ವ್ಯಕ್ತಿಗೆ ಇಲ್ಲದಿರುವುದು ಕ್ರಿಯಾ ಸ್ವಾತಂತ್ರ್ಯ ಎನಿಸಿಕೊಳ್ಳುತ್ತದೆ.

64. 'ಅನ್ ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು ? (2016 ಮಾರ್ಚ್)

1) 'ಅನ್ ಟು ದಿಸ್ ಲಾಸ್ಟ್' ಕೃತಿಯನ್ನು ಓದಲು ಪ್ರಾರಂಭಿಸಿದಾಗ ಕೆಳಗಿಳಿಸಲು ಸಾಧ್ಯವಾಗಲಿಲ್ಲ.

2) ಅದು ಅವರ ಮನಸ್ಸನ್ನು ಸೆರೆ ಇಡಿಯಿತು.

3) ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗೆ ಅನುಸಾರವಾಗಿ ತಮ್ಮ ಜೀವನವನ್ನು ಬದಲಾಯಿಸಿಕೊಳ್ಳಬೇಂದು ನಿರ್ಣಯಿಸಿಕೊಳ್ಳುವಷ್ಟು ಪರಿಣಾಮ ಬೀರಿತು.

65. ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವೇನು?

1) ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ವ್ಯಕ್ತಿಗೆ ಪಾಲು ಇರುತ್ತದೆ .

2) ಜನರಿಗೆ ಜೀವನ, ಸ್ವಾತಂತ್ರ್ಯ ಸತ್ಯಾನ್ವೇಷಣೆಗಳನ್ನು ಒದಗಿಸಿ ಕೊಡುವ ಜವಾಬ್ದಾರಿಯೂ ಇರುತ್ತದೆ.

66. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?

"ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ, ಶಿಕ್ಷಣದ ಆವಶ್ಯಕ ಅಂಶ" ಎನ್ನುವುದು ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

67. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ ?

ಜನರಿಗೆ ಸಂಸ್ಕೃತಿಯನ್ನು ಕೊಡಬೇಕು ಆಗ ಮಾತ್ರ ದೇಶದ ಪ್ರಗತಿ ಸ್ಥಿರವಾಗಲು ಸಾಧ್ಯ

68. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ ? (2016 ಜೂನ್ )

"ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣಕ್ಕಾಗಿ ಕಾರ್ಯೋನ್ಮುಖರಾಗಿ ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಲು ದುಡಿದಾಗ ಬಾಳಿನಲ್ಲಿ ತೃಪ್ತಿ ದೊರಕುತ್ತದೆ" ಎನ್ನುವುದು ವಿವೇಕಾನಂದರ ಅಭಿಪ್ರಾಯ.

69. ಒಂದನೆಯ ಒಗಟಿನ ಉತ್ತರ 'ಅಂಗಿ' ಎಂಬುದನ್ನು ಸಮರ್ಥಿಸಿರಿ.

ಅಂಗಿಯ ಎರಡು ತೋಳುಗಳ ಭಾಗವೇ ಕೈ.ಅಂಗಿಗೆ ತಲೆಯಿಲ್ಲ. ಅಂಗಿಯ ಬೇರೆಬೇರೆ ಭಾಗ ಸೇರಿಸಿ ಹೊಲಿಗೆ ಹಾಕಿರುವುದೇ ನವಗಾಯ, ಮೆಲ್ಲನೆ ಬಂದು ಶರೀರಕ್ಕೆ ತೊಡಿಸುವುದರಿಂದ ಅದು ಅಂಗಿಯಾಗಿ ಎಲ್ಲರಿಗೂ ಪ್ರಚಂಡವಾಗಿದೆ.

70. ಎರಡನೆಯ ಒಗಟಿಗೆ 'ಕುಪ್ಪಸ'ವು ಉತ್ತರ ಎಂಬುದನ್ನು ಹೇಗೆ ಹೇಳುವಿರಿ? (2016 ಜೂನ್ )

ಕುಪ್ಪಸಕ್ಕೆ ಅಂಗೈಯನ್ನು ತೂರಿಸಿದರೆ ಮುಂಗೈಯನ್ನು ದಾಟಿ ಶರೀರಕ್ಕೆ ಕೂರುತ್ತದೆ. ಆದ್ದರಿಂದ ಅದು ಸಿಂಗಳೀಕನಾಗದೆ ಕುಪ್ಪಸವಾಗಿದೆ.

71. ಐದನೆಯ ಒಗಟಿಗೆ 'ತಾವರೆ ಬೇರು' ಎಂಬುದು ಉತ್ತರ – ಹೇಗೆ?

ಕೆಸರಿನಲ್ಲಿ ಹುಟ್ಟಿ ಕೆಸರಿನಲ್ಲಿ ಬೆಳೆದು ಗಿಡವಾಗುವುದೆಂದರೆ ಅದು ತಾವರೆಯೇ ಹೌದು.ತಾವರೆ ಹುಟ್ಟುವುದು ಕೆಸರಿನಲ್ಲೇ ಆಗಿದೆ.ಆದ್ದರಿಂದ ಆ ಒಗಟಿಗೆ ಅರ್ಥ ತಾವರೆ ಬೇರು.

72. ಎಂಟನೆಯ ಒಗಟಿನ ಉತ್ತರ 'ಕೊಕ್ಕರೆ' ಎಂಬುದನ್ನು ಸಮರ್ಥಿಸಿ.

ಕೊಕ್ಕರೆ ಕಲ್ಲಿನಲ್ಲಿ ಕುಕ್ಕುವುದಿಲ್ಲ. ನೀರಿನಲ್ಲಿ ಮುಳುಗದೆ ತೇಲುತ್ತದೆ. ಮಡಿಮಡಿಯಾಗಿ ಬಿಳಿಯಾಗಿ ಇರುವುದರಿಂದ ಈ ಒಗಟಿನ ಉತ್ತರ ಕೊಕ್ಕರೆ.

73. ಉಪ್ಪಿನ ಒಗಟನ್ನು ಬರಿಯಿರಿ. (2016 ಮಾರ್ಚ್)

'ನೀರಲ್ಲೆ ಹುಟ್ಟೋದು ನೀರಲ್ಲೆ ಬೆಳಿಯೋದು ನೀರುನತಾಕಿದರೆ ಮಟಮಾಯ /ಕನ್ನಡದ ಬೆಡಗೀನ ಜಾಣೆ ತಿಳಿದೇಳೆ'

74. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?

ಒಗಟುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ.

ಉತ್ತರ ಕಂಡುಕೊಳ್ಳಲು ಮನಸ್ಸು ಆಲೋಚಿಸುತ್ತದೆ.ಮುದುಡಿದ ಮನಸ್ಸನ್ನು ಅರಳಿಸಲು, ಮನೋರಂಜನೆ ನೀಡಲು ಒಗಟುಗಳು ಸಹಾಯಕವಾಗುತ್ತವೆ. ಜನಪದರ ಬುದ್ಧಿವಂತಿಕೆಯನ್ನು ತಿಳಿಯುವುದರ ಜೊತೆಗೆ ಒಂದು ವಸ್ತುವನ್ನು ಹೇಗೆಲ್ಲ ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.

**ಸಂದರ್ಭದೊಡನೆ ಸ್ವಾರಸ್ಯ ವಿವರಿಸಿ** **( ನಾಲ್ಕು ಸಂದರ್ಭಗಳನ್ನು ನೀಡಲಾಗುತ್ತದೆ. 4*3=12)**

**ಆಯ್ಕೆ:–**ಈ ವಾಕ್ಯವನ್ನು_______________ಅವರು ಬರೆದಿರುವ __________________ಕೃತಿಯಿಂದ ಆಯ್ದ _______________ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ. ( ಅಂಕ–1)

ಉದಾಹರಣೆ

1. **"ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ"**

**ಆಯ್ಕೆ :–**ಈ ವಾಕ್ಯವನ್ನು **ಶ್ರೀ ಎ.ಎನ್. ಮೂರ್ತಿರಾವ್** ಅವರು ಬರೆದಿರುವ **'ಸಮಗ್ರ ಲಲಿತ ಪ್ರಬಂಧಗಳು** ಕೃತಿಯಿಂದ ಆಯ್ದ **' ವ್ಯಾಘ್ರಗೀತೆ '** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.


**ಸಂದರ್ಭ :–** ಮದಲಿಂಗನ ಕಣಿವೆಯ ಕಾಲುದಾರಿಯಲ್ಲಿ ಶಾನುಭೋಗರ ಬೆನ್ನ ಹಿಂದೆ ಬಂದ ಹುಲಿಯು 'ವೈರಿಯಾದರೂಸರಿಯೇ ಹಿಂದಿನಿಂದ ಹಾರಿ ಕೊಲ್ಲಬಾರದು' ಎಂಬ ತನ್ನ ಧರ್ಮವನ್ನು ನೆನೆದು, ಗೊಂದಲದಲ್ಲಿ ಇದ್ದ ಸಂದರ್ಭದಲ್ಲಿ ಪುಣ್ಯಕೋಟಿಯ ಈ ಮಾತನ್ನು ಲೇಖಕರು ನೆನಪಿಸಿಕೊಳ್ಳುತ್ತಾರೆ.

**ಸ್ವಾರಸ್ಯ :–** ತನ್ನನ್ನು ತಿನ್ನಲು ಆಹ್ವಾನ ಕೊಟ್ಟಾಗಲೂ ಹುಲಿರಾಯ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ಪ್ರಾಣಬಿಟ್ಟು, ತನ್ನ ಆದರ್ಶವನ್ನು ಹಾಗೂ ಧರ್ಮಶ್ರದ್ಧೆಯನ್ನು ಮೆರೆಯಿತು ಎಂಬುದನ್ನು ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.


## ಕವಿ ಪರಿಚಯ (ಎರಡು ಕವಿ ಪರಿಚಯಗಳನ್ನು ನೀಡಲಾಗುತ್ತದೆ.) 3*2=6

(ಮೊದಲು ಕಾಲ,ಸ್ಥಳ,ಕೃತಿ,ಪ್ರಶಸ್ತಿ/ಬಿರುದುಗಳನ್ನು ಬಿಡಿ ಬಿಡಿಯಾಗಿ ಕಲಿತು ನಂತರ ವಾಕ್ಯರೂಪದಲ್ಲಿ ಬರೆಯುವುದನ್ನು ಅಭ್ಯಾಸ ಮಾಡಬೇಕು.

### ಮ.ತಿ. ನರಸಿಂಹಾಚಾರ್ಯ

| | |
|---|---|
| ಕಾಲ–ಕ್ರಿ.ಶ. 1905<br>ಸ್ಥಳ– ಮಂಡ್ಯ ಜಿಲ್ಲೆಯ ಮೇಲುಕೋಟೆ<br>ಕೃತಿಗಳು – ಶಬರಿ, ಅಹಲ್ಯೆ, ರಸಸರಸ್ವತಿ, ಹಣತೆ, ಹರಿಚರಿತೆ'<br>ಪ್ರಶಸ್ತಿಗಳು–'ಪಂಪ ಪ್ರಶಸ್ತಿ' ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |  |

### ಗೊರೂರು ರಾಮಸ್ವಾಮಿ ಅಯ್ಯಂಗಾರ್ (2016 ಮಾರ್ಚ್) (2016 ಜೂನ್)

| | |
|---|---|
|  | ಕಾಲ– ಕ್ರಿ.ಶ 1904<br>ಸ್ಥಳ– ಹಾಸನ ಜಿಲ್ಲೆಯ ಗೊರೂರು<br>ಕೃತಿಗಳು – ಅಮೆರಿಕಾದಲ್ಲಿ ಗೊರೂರು, ಗರುಡಗಂಬದ ದಾಸಯ್ಯ,<br>ಹೇಮಾವತಿ ತೀರದಲ್ಲಿ , ನಮ್ಮ ಊರಿನ ರಸಿಕರು<br>ಪ್ರಶಸ್ತಿಗಳು– ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |


### ವಿನಾಯಕ ಕೃಷ್ಣ ಗೋಕಾಕ್

| | |
|---|---|
| ಕಾಲ– ಕ್ರಿ.ಶ. 1909<br>ಸ್ಥಳ– ಹಾವೇರಿ ಜಿಲ್ಲೆಯ ಸವಣೂರು<br>ಕೃತಿಗಳು – ಜೀವನಪಾಠಗಳು, ಭಾರತ ಸಿಂಧು ರಶ್ಮಿ<br>ಪ್ರಶಸ್ತಿಗಳು– ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |  |

### ಡಿ.ಎಸ್. ಜಯಪ್ಪ ಗೌಡ

| | |
|---|---|
|  | ಕಾಲ– ಕ್ರಿ.ಶ. 1947<br>ಸ್ಥಳ– ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿ<br>ಕೃತಿಗಳು – ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರಕಾರ್ಯಸಾಧನೆಗಳು,<br>ಕರ್ನಾಟಕ ಗ್ರಾಮೀಣ ಸಂಸ್ಥೆಗಳು,<br>ಪ್ರಶಸ್ತಿಗಳು– ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |


**ದೇವನೂರು ಮಹದೇವ**

| | |
|---|---|
| ಕಾಲ– ಕ್ರಿ.ಶ. 1949<br>ಸ್ಥಳ– ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರು<br>ಕೃತಿಗಳು – ಬಿದ್ದ ಅಕ್ಷರ, ಕುಸುಮ ಮಾಲೆ, ದ್ಯಾವನೂರು. ಒಡಸಾಳ<br>ಪ್ರಶಸ್ತಿಗಳು– ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |  |

**ದುರ್ಗಸಿಂಹ**

| | |
|---|---|
| | ಕಾಲ– ಕ್ರಿ.ಶ. 1031<br>ಸ್ಥಳ– ಕಿಸುಕಾಡು ನಾಡಿನ ಸಯ್ಯಡಿ<br>ಕೃತಿಗಳು – ‘ ಪಂಚತಂತ್ರ ’ |

**ಎ.ಎನ್. ಮೂರ್ತಿರಾವ್**

| | |
|---|---|
| ಕಾಲ– ಕ್ರಿ.ಶ.1900<br>ಸ್ಥಳ– ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಅಕ್ಕಿಹೆಬ್ಬಾಳು<br>ಕೃತಿಗಳು – ದೇವರು , ಹಗಲುಗನಸುಗಳು, ಅಲೆಯುವ ಮನ,ಚಂಡಮಾರುತ<br>ಪ್ರಶಸ್ತಿಗಳು– ಪಂಪ ಪ್ರಶಸ್ತಿ , ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು |  |

**ಪಂಪ** (2016 ಮಾರ್ಚ್)

| | |
|---|---|
| ಕಾಲ– ಕ್ರಿ.ಶ. ಸುಮಾರು 941<br>ಸ್ಥಳ– ವೆಂಗಿಮಂಡಲದ ವೆಂಗಿಪೊಳು ಎಂಬ ಅಗ್ರಹಾರ<br>ಕೃತಿಗಳು – ವಿಕ್ರಮಾರ್ಜುನವಿಜಯ ಮತ್ತು ಆದಿಪುರಾಣ<br>ಬಿರುದುಗಳು – ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾಣವ |  |

**ದ.ರಾ.ಬೇಂದ್ರೆ**

| | |
|---|---|
|  | ಕಾಲ– ಕ್ರಿ.ಶ.1896<br>ಸ್ಥಳ– ಧಾರವಾಡ<br>ಕೃತಿಗಳು – ಗರಿ , ನಾದಲೀಲೆ, ನಾಕುತಂತಿ, ಗಂಗಾವತರಣ, ಸಖಿಗೀತ,<br>ಪ್ರಶಸ್ತಿಗಳು– ಭಾರತೀಯ ಜ್ಞಾನಪೀಠ ಪ್ರಶಸ್ತಿ , ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ |

## ಜೇಡರ ದಾಸಿಮಯ್ಯ

ಕಾಲ– ಕ್ರಿ.ಶ. ಸುಮಾರು 11ನೇ ಶತಮಾನ


ಸ್ಥಳ– ಯಾದಗಿರಿ ಸನಿಹದ ಮುದೇನೂರು

ಸಾಹಿತ್ಯ– ವಚನಗಳು

ಅಂಕಿತನಾಮ – ರಾಮನಾಥ



## ಬಸವಣ್ಣ



ಕಾಲ– ಕ್ರಿ.ಶ. ಸುಮಾರು 12ನೇ ಶತಮಾನ

ಸ್ಥಳ– ಬಿಜಾಪುರ ಜಿಲ್ಲೆಯ ಬಾಗೇವಾಡಿ

ಸಾಹಿತ್ಯ– ವಚನಗಳು

ಅಂಕಿತನಾಮ – ಕೂಡಲ ಸಂಗಮದೇವ

## ಜಿ.ಎಸ್. ಶಿವರುದ್ರಪ್ಪ

ಕಾಲ : ಕ್ರಿ.ಶ. 1926

ಸ್ಥಳ : ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ


ಕೃತಿಗಳು : ‘ಎದೆತುಂಬಿ ಹಾಡಿದೆನು, ಸಾಮಗಾನ, ದೀಪದ ಹೆಜ್ಜೆ, ದೇವಶಿಲ್ಪಿ, ಅನಾವರಣ,

ಪ್ರಶಸ್ತಿಗಳು : ರಾಷ್ಟ್ರಕವಿ ಪ್ರಶಸ್ತಿ, ನಾಡೋಜ ಪ್ರಶಸ್ತಿ , ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ



## ಕುಮಾರವ್ಯಾಸ

(2016 ಜೂನ್)




ಮೂಲ ಹೆಸರು : ನಾರಾಯಣಪ್ಪ

ಕಾಲ : ಕ್ರಿ.ಶ. ಸುಮಾರು 1430

ಸ್ಥಳ : ಗದಗ ಪ್ರಾಂತ್ಯದ ಕೋಳಿವಾಡ

ಕೃತಿಗಳು : ಕರ್ಣಾಟ ಭಾರತ ಕಥಾಮಂಜರಿ

ಬಿರುದುಗಳು : ರೂಪಕ ಸಾಮ್ರಾಜ್ಯ ಚಕ್ರವರ್ತಿ


## ಲಕ್ಷ್ಮೀಶ

ಕಾಲ : ಕ್ರಿ.ಶ. ಸುಮಾರು 1550

ಸ್ಥಳ : ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರು


ಕೃತಿಗಳು : ಜೈಮಿನಿ ಭಾರತ

ಬಿರುದುಗಳು : ಉಪಮಾಲೋಲ, ಕರ್ಣಾಟ ಕವಿಚೂತಾವನ ಚೈತ್ರ




## ಕಂಠಪಾಠ ಪದ್ಯಗಳು 4x1=4

### ಎಮ್ಮನುಡಿಗೇಳ್




ನೀನುಳ್ಳೊಡೆಲ್ಲರೊಳರೆಮ
ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೇ।
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ॥ – ಆದಿಕವಿ ಪಂಪ

### ಹಕ್ಕಿಹಾರುತ್ತಿದೆನೋಡಿದಿರಾ..... (2016 ಮಾರ್ಚ್) (2016 ಜೂನ್)




ನೀಲಮೇಘ ಮಂಡಲ–ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೂ ಅಣ್ಣಾ
ಚಿಕ್ಕೆಯ ಮಾಲೆಯ ಸಿಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತ್ತಿದೆ ನೋಡಿದಿರಾ.....? – ದ.ರಾ. ಬೇಂದ್ರೆ

### ಸಂಕಲ್ಪ ಗೀತೆ

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ.... – ಜಿ.ಎಸ್. ಶಿವರುದ್ರಪ್ಪ



### ಕೌರವೇಂದ್ರನ ಕೊಂದೆ ನೀನು




ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲ್ಲಿ ಸುಭಟಕೋಟಿಯನು ॥
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನೆಯ
ವೀರರೈವರ ನೋಯಿಸೆನು ರಾಜೀವಸಖನಾಣೆ ॥ –ಕುಮಾರವ್ಯಾಸ,
(ಗದುಗಿನ ನಾರಾಯಣಪ್ಪ)

## ನಾಲ್ಕು ಅಂಕದ ಪ್ರಶ್ನೆಗಳಿಗೆ ಉತ್ತರಿಸಿ 2*4=8

**1) ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ** (2016 ಮಾರ್ಚ್) (2016 ಜೂನ್)

- ಶಬರಿ ಬೇಡರಾಜನ ಮಗಳು. ಆಕೆ ಮತಂಗಾಶ್ರಮದಲ್ಲಿ ಬಂದು ಇದ್ದಳು.
- ಮತಂಗ ಋಷಿಗಳು ಇಲ್ಲಿಗೆ ಶ್ರೀರಾಮ ಬರುತ್ತಾನೆ ಅವನ ದರ್ಶನ ಪಡೆದರೆ ಮುಕ್ತಿ ಸಿಗುತ್ತದೆ ಎಂದು ಹೇಳಿದ್ದರು.
- ಅದರಂತೆ ಶಬರಿ ಶ್ರೀರಾಮನ ದರ್ಶನಕ್ಕಾಗಿ ಕಾಯುತ್ತಿದ್ದಳು.
- ಶ್ರೀರಾಮಗಾಗಿ ದಿನಾಲೂ ಹೂ-ಹಣ್ಣುಹಂಪಲುಗಳನ್ನು ತಂದು ಇಟ್ಟುಕೊಂಡು ರಾಮ ಇವತ್ತು ಬರುವನೋ/ನಾಳೆ ಬರುವುನೋ ಎಂಬ ಚಿಂತೆಯಲ್ಲಿ ಇರುತ್ತಾಳೆ .
- ಒಂದು ದಿನ ಶ್ರೀರಾಮ-ಲಕ್ಷ್ಮಣರು ಅಲ್ಲಿಗೆ ಬರುತ್ತಾರೆ.
- ಅದನ್ನು ನೋಡಿದ ಶಬರಿ ಅವರಿಗೆ ಕರೆದುಕೊಂಡು ಹೋಗಿ ,ಹೂ-ಹಣ್ಣುಹಂಪಲುಗಳನ್ನು ಕೊಟ್ಟು ಆನಂದಪಡುತ್ತಾಳೆ.
- ಹೀಗೆ ಶಬರಿ ಚಿಂತೆ ಹಿಂಗಿ ಹೋಗಿತು.

**2) ಶಬರಿಯ ಸಡಗರ ,ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ?** (2016 ಜೂನ್)

- ✓ ಶಬರಿ ಶ್ರೀರಾಮ ಬಂದು ನಿಂತಿರುವುದನ್ನು ಕಂಡಳು.
- ✓ ಹತ್ತಿರ ಹೋಗಿ ಮೈಮುಟ್ಟಿ,ಪಾದಕ್ಕೆ ನಮಸ್ಕರಿಸಿ ಕಣ್ಣಿಗೆ ಒತ್ತಿಕೊಂಡಳು
- ✓ ಕಣ್ಣೀರು ಸುರಿಸುತ್ತ ದುಃಖಿತಳಾದಳು
- ✓ ಅಯ್ಯೋ ಇನ್ನು ಏನು ಅಣಿ ಮಾಡಿಲ್ಲ. ನಿನ್ನೆಯಷ್ಟು ಚೆಂದವಿಲ್ಲ ಎನ್ನುತ್ತಾ ಶ್ರೀರಾಮನಿಗೆ ಹೂವಿನಮಾಲೆಯನ್ನು ಹಾಕಿದಳು.
- ✓ ಸಂತೋಷದಿಂದ ಹಿಗ್ಗಿದಳು.
- ✓ ರುಚಿ ರುಚಿಯಾದ ಹಣ್ಣುಗಳನ್ನು ಕೊಟ್ಟಳು.
- ✓ ಶ್ರೀರಾಮ ಲಕ್ಷಣರು ಸಂತೋಷಗೊಂಡರು. ಶಬರಿ ಸಂತೋಷಗೊಂಡಳು.

**3) ಗೊರೂರು ಸ್ವಾಮಿ ಅಯ್ಯಾಂಗಾರರ ವೇಷಭೂಷಣಗಳು ಹೇಗಿದ್ದವು ?**

- ಅಗಲವಾದ ಎಂಟುವರೆ ಮೊಳ ಉದ್ದದ ಖಾದಿ ಪಂಚೆಯನ್ನು ಉಟ್ಟಿದ್ದರು.
- ಪಂಚೆಯಲ್ಲಿ ಕೆಂಪು ಕಂಬಿ, ಕಂಬಿಯ ತುದಿಯಲ್ಲಿ ನಾಲ್ಕು ಜರಿಗೆರೆಗಳು ಇದ್ದವು.
- ಒಂದು ಕೆಂಪು ಉಣ್ಣೆಯ ಶಾಲು, ಮಫ್ಲರ್ ಹಾಕಿಕೊಂಡಿದ್ದರು.
- ಕಾವಿಬಣ್ಣದ ನೀಳವಾದ ಜುಬ್ಬ ತೊಟ್ಟಿದ್ದರು.
- ಹಣೆಯಲ್ಲಿ ಢಾಳವಾದ ಕೆಂಪು ನಾಮ ಹಚ್ಚಿಕೊಂಡಿದ್ದರು.
- ಬಿಳಿ ಕೂದಲು,ಗಡ್ಡ, ಮೀಸೆ ಬಿಟ್ಟುಕೊಂಡಿದ್ದರು.
- ಕಾಲಿಗೆ ದಪ್ಪನಾದ ಎಕ್ಕಡ (ಚಪ್ಪಲಿ) ಹಾಕಿಕೊಂಡಿದ್ದರು.

**4) ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರರು ಅಮೆರಿಕಾದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಹೇಗೆ ಪರಿಚಯಿಸಿದರು ?**

- ➢ ನಾನು ಗಾಂಧೀ ಭಾರತದಲ್ಲಿ ಜನಿಸಿದವನು.
- ➢ ಭಾರದ ಹವೆ ಬಹಳ ಹಿತವಾಗಿರುತ್ತದೆ.
- ➢ ಅಲ್ಲಿ ಕಡಿಮೆ ಬಟ್ಟೆಯಿಂದ ಜೀವಿಸಬಹುದು.
- ➢ ಖಾದಿ ಬಟ್ಟೆಯನ್ನು ಭಾರತದಲ್ಲಿ ಪ್ರಚಾರಕ್ಕೆ ತಂದವರು ಗಾಂಧೀಜಿ.
- ➢ ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ.
- ➢ ಇದಕ್ಕೆ ಯಂತ್ರದ ಸೊಂಕು ಉಂಟಾಗಿಲ್ಲ.
- ➢ ರಾಟೆ(ಚರಕ)ಯಿಂದ ನೂಲು ತೆಗೆಯುವುದು.
- ➢ ಮಗ್ಗದಿಂದ ನೇಯುವುದು.

**5) ಧೃತರಾಷ್ಟ್ರನು ಸಂಧಿ ಮಾಡಿಕೋ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು ?** (2016 ಜೂನ್)

- ಮಹಾಭಾರತ ಯದ್ಧದಲ್ಲಿ ದುರ್ಯೋಧನ ಒಬ್ಬನನ್ನಾದರೂ ಉಳಿಸಿಕೊಳ್ಳಬೇಕೆಂದು ಧೃತರಾಷ್ಟ್ರ ಮತ್ತು ಗಾಂಧಾರಿಯರು ಯುದ್ಧರಂಗಕ್ಕೆ ಬರುತ್ತಾರೆ.
- ಧೃತರಾಷ್ಟ್ರನು ಮಗನೇ ನನಗೂ ಪಾಂಡುವಿಗೂ ಬೇಧವಿಲ್ಲ.
- ಈ ಭೂಮಿಯನ್ನು ಹಂಚಿಕೊಂಡು ಆಳೋಣ.
- ಪಾಂಡವರು ಹೊಂದಿಕೊಳ್ಳುತ್ತಾರೆ.
- ನಿನ್ನಿಂದಲೆ ಯುದ್ಧ ಆಯಿತು ಎಂದು ಹೇಳಿದರೆ ಸಿಟ್ಟಾಗುತ್ತಿಯಾ.
- ಭೀಷ್ಮರಿಗೆ, ದ್ರೋಣರಿಗೆ, ಕರ್ಣರಿಗೆ ಸೋಲಿಸಲು ಅಸಾಧ್ಯನಾದ ಅರ್ಜುನನ್ನು ಸೋಲಿಸುವವರು ಯಾರು ಇಲ್ಲ.
- ಆದ್ದರಿಂದ ಸಂಧಿಯನ್ನು ಮಾಡಿಕೊಳ್ಳೋಣ.

**6) ಕರ್ಣನಿಗೆ ಕೃಷ್ಣನು ಒಡ್ಡಿದ ಆಮಿಷಗಳೇನು ?** (2016 ಮಾರ್ಚ್)

- ಕುಂತಿಪುತ್ರರಲ್ಲಿ ಮೊದಲಿಗ ನೀನು, ನ್ಯಾಯಯುತವಾಗಿ ನೀನು ರಾಜನಾಗಬೇಕಾದವನು.
- ನಿನಗೆ ಹಸ್ತಿನಾಪುರದ ರಾಜ ಪದವಿಯನ್ನು ಕೊಡಿಸುತ್ತೇನೆ.
- ಪಾಂಡವರು,ಕೌರವರು ನಿನ್ನ ರಾಜ ಪದವಿಯನ್ನು ಒಪ್ಪಿಕೊಳ್ಳುತ್ತಾರೆ.
- ಎರಡು ವಂಶದವರು ನಿನ್ನ ಸೇವೆಯನ್ನು ಮಾಡುತ್ತಾರೆ.
- ಕೌರವನೆದರು ಕೈಯೊಡ್ಡಿ ನಿಲ್ಲುವುದು ಸರಿಯಲ್ಲ.
- ಎಡಕ್ಕೆ ಕೌರವರು,ಬಲಕ್ಕೆ ಪಾಂಡವರು,ಎದುರಿಗೆ ಮಾದ್ರ,ಮಾಗಾಧಿ–ಯಾದವರು ಇರುತ್ತಾರೆ.
- ನೀನು ಸಿಂಹಾಸನದಲ್ಲಿ ಕುಳಿತು ರಾಜಸಭೆಯನ್ನು ಮಾಡಬಹುದು.
- ದುರ್ಯೋಧನನು ಹೇಳಿದಂತೆ ಜೀಯಾ,ಹಸಾದ ಎನ್ನುವುದು ಕಷ್ಟವಲ್ಲವೆ. ಎಂದು ಆಮಿಷಗಳನ್ನು ಒಡ್ಡಿದನು.

**7) ಪಾಂಡವರು ಸೋದರರು ಎಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.** (2016 ಮಾರ್ಚ್)

- ಕರ್ಣನ ಕೊರಳ ನರಗಳು ಬಿಗಿದವು.
- ಕಣ್ಣೆರು ಹೆಚ್ಚು ಹೆಚ್ಚಾಗಿ ಕಣ್ಣು ತುಂಬಿಕೊಂಡವು.
- ಅತಿಯಾಗಿ ನೊಂದುಕೊಂಡನು.
- ಮನದೊಳಗೆ ಕೌರವನಿಗೆ ಕೇಡಾಯಿತು ಎಂದುಕೊಂಡನು.
- ಹರಿಯು ತನ್ನ ದ್ವೇಷವನ್ನು ಹೊರಗೆ ತೋರಿಸಿದೆ ತೀರಿಸಿಕೊಳ್ಳುವುನಲ್ಲ.
- ನನ್ನ ವಂಶವನ್ನು ತಿಳಿಸಿ ನನ್ನನ್ನು ಕೊಂದು ಹಾಕಿದನು.
- ಮುಂದೇನು ಮಾತನಾಡುವುದು ಎಂದು ಚಿಂತಿಸಿದನು.

*****************************************************************************************************

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1x4=4**

**(2016 ಮಾರ್ಚ್)**

**ಕಲುಷಿತವಾದೀ ನದೀ ಜಲಗಳಿಗೆ**

**ಮುಂಗಾರಿನ ಮಳೆಯಾಗೋಣ**

**ಬರಡಾಗಿರವೀ ಕಾಡು ಮೇಡುಗಳ**

**ವಸಂತವಾಗುತ ಮುಟ್ಟೋಣ**

ಆಧುನಿಕ ಮಾನವನ ಹಸ್ತಕ್ಷೇಪದಿಂದ ಕಲುಷಿತವಾದ ನದಿಗಳ ಶುದ್ಧೀಕರಣ ಮಾಡಲು ಭೋರ್ಗರೆಯುವ ಮುಂಗಾರಿನ ಮಳೆಯೇ ಬೇಕು. ಹಾಗೆಯೇ ಕಲ್ಮಷಗಳಿಂದ ಕೂಡಿದ ಮನುಷ್ಯರ ಮನಸ್ಸುಗಳನ್ನು ಪ್ರೀತಿಯ ಮೂಲಕ ಹಸನಗೊಳಿಸೋಣ. ಆಧುನೀಕರಣ , ಜಾಗತೀಕರಣ, ಕೈಗಾರೀಕರಣ, ಡಾಂಬರೀಕರಣ, ಯಾಂತ್ರೀಕರಣಗಳಿಂದಾಗಿ ಕಾಡುಗಳು ನಾಶವಾಗಿ ಪರಿಸರ ಬರಡಾದ ಮರುಭೂಮಿಯಂತಾಗಿದೆ. ಅಲ್ಲಿ ಗಿಡಮರಗಳನ್ನು ಬೆಳೆಸುತ್ತ, ಬೆಳೆಸುವ ಅವಶ್ಯಕತೆಯನ್ನು ಜನರಲ್ಲಿ ಜಾಗೃತಗೊಳಿಸುವ ಕಾರ್ಯವನ್ನು ಮಾಡೋಣ ಎನ್ನಬಹುದು. ಅಂದರೆ ನಾಗರೀಕತೆಯ ಬರಾಟೆಯಲ್ಲಿ ಮೌಲ್ಯಗಳು ಕುಸಿಯುತ್ತಿವೆ,ಅಂತಹ ಹೃದಯದಲ್ಲಿ ಮೌಲ್ಯಗಳೆಂಬ ಸಸಿಗಳನ್ನು ನೆಟ್ಟು ,ಪ್ರೀತಿಯ ನೀರನ್ನು ಎರೆಯುತ್ತ ಬದುಕನ್ನು ವಸಂತವಾಗಿಸೋಣ ಎಂದು ಬದುಕು ಹಸನುಗೊಳಿಸುವ ಮೌಲ್ಯವನ್ನು ಕವಿ ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ.

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1x4=4**

**ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ**

**ಹೊಸ ಭರವಸೆಗಳ ಕಟ್ಟೋಣ**

**ಮನುಜರ ನಡುವಣ ಅಡ್ಡಗೋಡೆಗಳ**

**ಕೆಡವುತ ಸೇತುವೆಯಾಗೋಣ.**

ಬಡತನ, ಅಜ್ಞಾನ, ಮೂಢನಂಬಿಕೆ, ಧರ್ಮ, ಭಾಷೆ, ಜಾತಿಗಳಿಂದ ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕಲು ಆಸರೆ ನೀಡಿ ಮೇಲೆ ತರಬೇಕು. ಅವರ ಮನಸ್ಸಿನಲ್ಲಿ ಬದುಕುವ ಹೊಸ ಭರವಸೆಗಳನ್ನು ಕೊಡಬೇಕು. ಹಾಗೆಯೇ ಮನುಷ್ಯರ ನಡುವೆ ಜಾತಿ, ಧರ್ಮ, ಭಾಷೆ, ವರ್ಣಗಳಿಂದ ಆವೃತವಾದ ಅಡ್ಡಗೋಡೆಗಳನ್ನು ಕೆಡವಿಹಾಕಬೇಕು. ವಿಶ್ವದ ಜನರೆಲ್ಲರನ್ನು ಒಂದಾಗಿಸುವ ಪ್ರೀತಿಯ, ಸ್ನೇಹದ ಸೇತುವೆಯನ್ನು ನಿರ್ಮಿಸೋಣವೆಂದು ಕವಿ ಕವಿ ಜಿ.ಎಸ್.ಶಿವರುದ್ರಪ್ಪನವರು ಸಮಾನತೆಯ ಮೌಲ್ಯವನ್ನು ಹೇಳಿದ್ದಾರೆ

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧಿರಿಸಿ ಸಾರಾಂಶ ಬರೆಯಿರಿ. 1x4=4**

**ಮತಗಳೆಲ್ಲವೂ ಪಥಗಳು ಎನ್ನುವ** (2016 ಜೂನ್)

**ಹೊಸ ಎಚ್ಚರದೊಳು ಬದುಕೋಣ**

**ಭಯ ಸಂಶಯದೊಳು ಕಂದಿದ ಕಣ್ಣೊಳು**

**ನಾಳಿನ ಕನಸನು ಬಿತ್ತೋಣ.**

ಭಾರತದಲ್ಲಿ ವಿವಿಧ ಮತಪಂಥಗಳಿದ್ದು ಬೇರೆಬೇರೆ ರೀತಿಯ ಆಚರಣೆ, ಸಂಪ್ರದಾಯಗಳು ಇವೆ.ಆದರೂ ವಿವಿಧತೆಯಲ್ಲಿ ಏಕತೆಯನ್ನು ಕಾಣುವ ದೇಶ ಭಾರತ .ಇಂತಹ ಮತಪಂಥಗಳೆಲ್ಲವೂ ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿಯಬೇಕು. ಅಸಮಾನತೆ, ಭಯೋತ್ಪಾದಕತೆ, ಶೋಷಣೆ ಇತ್ಯಾದಿಗಳಿಂದ ಭಯ–ಭೀತಿಗೊಂಡು, ನಾಳಿನ ಬದುಕಿನ ಬಗ್ಗೆ ಸಂಶಯಗೊಂಡು ನಿರಾಸೆ ಹೊಂದಿದ ಮನಸ್ಸುಗಳಿಗೆ ಮುಂದಿನ ಬದುಕಿಗೆ ಉತ್ತಮ ಕನಸನ್ನು ಅವರಲ್ಲಿ ಬಿತ್ತಿ, ಧೈರ್ಯ ನೀಡಬೇಕೆಂದು ಸಮಾನತೆಯ ತತ್ವ ಮತ್ತು ಒಳ್ಳೆ ಬದುಕಿನ ಭರವಸೆಯ ಬಗ್ಗೆ ಜಿ.ಎಸ್.ಶಿವರುದ್ರಪ್ಪನವರು ಅರಿವು ಮೂಡಿಸಿದ್ದಾರೆ.

ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.

ಅಂಕ ವಿತರಣೆ
- ಪ್ರಸ್ತಾರ 1 ಅಂಕ
- ಗಣ ವಿಭಾಗ 1 ಅಂಕ
- ಛಂದಸ್ಸಿನ ಹೆಸರು 1 ಅಂಕ
- ಒಟ್ಟು 3 ಅಂಕಗಳು

## ಕಂದಪದ್ಯ

ಕಂದಪದ್ಯ ಎಂದರೆ ನಾಲ್ಕು ಸಾಲಿನ ಪದ್ಯ ಆದರೆ ಛಂದಸ್ಸು ಗುರುತಿಸಲು ಎರಡು ಸಾಲುಗಳನ್ನು ನೀಡಲಾಗುತ್ತದೆ.

** ಎರಡು ಸಾಲುಗಳಿದ್ದರೆ ಅದು ಕಂದಪದ್ಯ ಎಂದು ಬರೆಯಿರಿ (ಛಂದಸ್ಸಿನ ಹೆಸರು – 1 ಅಂಕ ) (2016 ಜೂನ್)

________________

_______________________

ಛಂದಸ್ಸು – ಕಂದ ಪದ್ಯ

ಉದಾಹರಣೆಗೆ

| | | | | |
|---|---|---|---|---|
| UUUU | U U – | UU – | | |
| ಅತಿಕುಟಿ | ಲ ಮನಂ | ಧನಲು | | |
| UU – | – – | U–U | UU– | UU– |
| ಬ್ಧತೆಯಿಂ | ದಂದು | ಷ್ಟಬುದ್ಧಿ | ನುಡಿದಂ | ಪುಸಿಯಂ |

ಛಂದಸ್ಸು – ಕಂದ ಪದ್ಯ

| | | | | | |
|---|---|---|---|---|---|
| 4 | 4 | 4 | | | 12 |
| 4 | 4 | 4 | 4 | 4 | 20 |

ಛಂದಸ್ಸು – ಕಂದ ಪದ್ಯ

4 4 4 =12

| | | | |
|---|---|---|---|
| – – | U – U | U U UU | 12 |
| ನೀನು | ಳ್ಳೊಡೆಲ್ಲ | ರೊಳರೆಮ | |

4 4 4 4 4 =20

| | | | | | |
|---|---|---|---|---|---|
| – U U | – U U | U – U | – U U | U U – | 20 |
| ಗೇನುಮ | ಳಲ್ಮನ | ದೊಳಿಲ್ಲ | ದೆಂತೆನೆ | ಮಗನೇ | |

ಛಂದಸು– ಕಂದ ಪದ್ಯ

# ಷಟ್ಪದಿ

ಷಟ್ಪದಿ ಛಂದಸ್ಸಿನಲ್ಲಿ ಆರು ಸಾಲುಗಳಿರುತ್ತವೆ. ಪರೀಕ್ಷೆಯಲ್ಲಿ ಛಂದಸ್ಸು ಗುರುತಿಸಲು ಮೂರು ಸಾಲುಗಳನ್ನು ನೀಡಲಾಗುತ್ತದೆ.

*** 3 ಸಾಲುಗಳಿದ್ದು ಕುಮಾರವ್ಯಾಸನ **ಕೌರವೇಂದ್ರನ ಕೊಂದೆ ನೀನು** ಪದ್ಯಗಳ ಉದಾಹರಣೆ ಕೊಟ್ಟಿದ್ದರೆ ಅದು **ಭಾಮಿನಿ ಷಟ್ಪದಿ** ಎಂದು ಬರೆಯಿರಿ (ಛಂದಸ್ಸಿನ ಹೆಸರು – 1 ಅಂಕ) ) (2016 ಮಾರ್ಚ್)

________________

________________

_________________________

ಛಂದಸ್ಸು– ಭಾಮಿನಿ ಷಟ್ಪದಿ

ಏನು ಹೇಳೈ ಕರ್ಣ

ಗ್ಲಾನಿ ಯಾವುದು ಮನಕೆ ಕುಂತೀ

ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ॥

3 4 3 4 =14

| | | | |
|---|---|---|---|
| – U | – – | –U | – – |
| ಏನು | ಹೇಳೈ | ಕರ್ಣ | ಚಿತ್ತ |

3 4 3 4 =14

| | | | |
|---|---|---|---|
| – U | – U U | U U U | – – |
| ಗ್ಲಾನಿ | ಯಾವುದು | ಮನಕೆ | ಕುಂತೀ |

3 4 3 4 3 4 1ಗುರು =21+ 1ಗುರು

| | | | | | | |
|---|---|---|---|---|---|---|
| – U | UU UU | –U | – U U | – U | – UU | – |
| ಸೂನು | ಗಳ ಬೆಸ | ಕೈಸಿ | ಕೊಂಬುದು | ಸೇರ | ದೇನಿನ | ಗೆ |

ಛಂದಸ್ಸು– **ಭಾಮಿನಿ ಷಟ್ಪದಿ**

*** 3 ಸಾಲುಗಳಿದ್ದು ಲಕ್ಷ್ಮೀಶನ **ವೀರಲವ** ಪದ್ಯಗಳ ಉದಾಹರಣೆ ಕೊಟ್ಟಿದ್ದರೆ ಅದು **ವಾರ್ಧಕ ಷಟ್ಪದಿ** ಎಂದು ಬರೆಯಿರಿ (ಛಂದಸ್ಸಿನ ಹೆಸರು – 1 ಅಂಕ)

__________________

__________________

____________________________

ಛಂದಸ್ಸು– **ವಾರ್ಧಕ ಷಟ್ಪದಿ**

**ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ**

**ನೊರ್ವನೇ ವೀರನಾತನ ಯಜ್ಞತುರಗಮಿದು**

**ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥**

5 5 5 5 =20

| | | | |
|---|---|---|---|
| – U – | – UU | UUU UU | – – U |
| ಉರ್ವಿಯೊಳ್ | ಕೌಸಲ್ಯೆ | ಪಡೆದ ಕುವ | ರಂ ರಾಮ |

5 5 5 5 =20

| | | | |
|---|---|---|---|
| – U – | – U – | UU – U | UUU U U |
| ನೊರ್ವನೇ | ವೀರನಾ | ತನ ಯಜ್ಞ | ತುರಗಮಿದು |

5 5 5 5 5 5 1ಗುರು =30+1ಗುರು

| | | | | | | |
|---|---|---|---|---|---|---|
| – U UU | – U – | – U – | UUU – | – U – | UU U – | – |
| ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಖನ ವನೋ | ದಿ |

ಛಂದಸ್ಸು – **ವಾರ್ಧಕ ಷಟ್ಪದಿ**

* 1 ಸಾಲು ಉದಾಹರಣೆ ಕೊಟ್ಟಿದ್ದರೆ  ಅದು ವೃತ್ತ ಛಂದಸ್ಸು

*________________________________________________ *

* ಒಂದು ಸಾಲು ಇದೆ ಅಂದ ತಕ್ಷಣ **3–3 ಅಕ್ಷರಗಳಿಗೆ** ಒಂದು ಗಣ ವಿಂಗಡಿಸಿ ಬರೆಯಿರಿ (ಗಣ ವಿಭಾಗ 1 ಅಂಕ)

* ಕೆಳಗಿನ ಲಕ್ಷಣ ತಿಳಿದು ವೃತ್ತದ ಹೆಸರು ಬರೆಯಿರಿ (ಛಂದಸ್ಸಿನ ಹೆಸರು – 1 ಅಂಕ) )

(ಪಾದದ ಆದಿಯಲ್ಲಿ ಲಘು ಎರಡು ಗುರು ಎರಡು ಬಂದರೆ ಅದು **ಮತ್ತೇಭ ವಿಕ್ರೀಡಿತ ವೃತ್ತ)** (2016 ಮಾರ್ಚ್)

(ಲಘುದ್ವಯ ಗುರು ದ್ವಯ ಮತ್ತೇಭ)

ಉದಾಹರಣೆ :–

ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ

(ಮೂರು –ಮೂರು ಅಕ್ಷರಗಳಿಗೆ ಗಣ ವಿಂಗಡಿಸುವುದು)

ಎನಗಂ / ಪಾಂಡುಗ / ಮಿಲ್ಲ ಭೇ / ದಮಿಳೆ / ಯಂ ಪಚ್ಚಾ / ಳ್ವಮಾ ಪಾಂ / ಡುನಂ

| UU– | – U | | | | | |
|---|---|---|---|---|---|---|
| ಎನಗಂ | ಪಾಂಡುಗ | ಮಿಲ್ಲ ಭೇ | ದಮಿಳೆ | ಯಂ ಪಚ್ಚಾ | ಳ್ವ ಮಾ ಪಾಂ | ಡುನಂ |

ಛಂದಸ್ಸು – **ಮತ್ತೇಭ ವಿಕ್ರೀಡಿತ ವೃತ್ತ**

| ಸ | ಭ | ರ | ನ | ಮ | ಯ | ಲಗ |
|---|---|---|---|---|---|---|
| UU– | – U U | – U – | UUU | – – – | U – – | U – |
| ಎನಗಂ | ಪಾಂಡುಗ | ಮಿಲ್ಲ ಭೇ | ದಮಿಳೆ | ಯಂ ಪಚ್ಚಾ | ಳ್ವ ಮಾ ಪಾಂ | ಡುನಂ |

ಛಂದಸ್ಸು – **ಮತ್ತೇಭ ವಿಕ್ರೀಡಿತ ವೃತ್ತ**

* ಒಂದು ಸಾಲು ಇದೆ ಅಂದ ತಕ್ಷಣ 3–3 **ಅಕ್ಷರಗಳಿಗೆ** ಒಂದು ಗಣ ವಿಂಗಡಿಸಿ ಬರೆಯಿರಿ (ಗಣ ವಿಭಾಗ 1 ಅಂಕ)

* ಕೆಳಗಿನ ಲಕ್ಷಣ ತಿಳಿದು ವೃತ್ತದ ಹೆಸರು ಬರೆಯಿರಿ (ಛಂದಸ್ಸಿನ ಹೆಸರು – 1 ಅಂಕ) )

( ಪಾದದ ಆದಿಯಲ್ಲಿ 4– ಲಘು ಬಂದರೆ ಅದು **ಚಂಪಕ ಮಾಲಾ ವೃತ್ತ** )

(ಲಘು ನಾಲ್ಕಾಗಿರಲ್ ಚಂಪಕ )

ಉದಾಹರಣೆ :–

ಕುರುಕುಳ ನಂದನಂ ಪವನನಂದನನೆಂಬ ಮದಾಂಧ ಗಂಧಸಿಂ

(ಮೂರು –ಮೂರು ಅಕ್ಷರಗಳಿಗೆ ಗಣ ವಿಂಗಡಿಸುವುದು)

ಕುರುಕು / ಳ ನಂದ / ನಂ ಪವ / ನನಂದ / ನನೆಂಬ / ಮದಾಂಧ / ಗಂಧಸಿಂ

| | | | | | | |
|---|---|---|---|---|---|---|
| U U U | U – | | | | | |
| ಕುರುಕು | ಳನಂದ | ನಂಪವ | ನನಂದ | ನನೆಂಬ | ಮದಾಧ | ಗಂಧಸಿಂ |

ಛಂದಸ್ಸು– **ಚಂಪಕ ಮಾಲಾ ವೃತ್ತ**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U U U | U – U | – U U | U – U | U – U | U – U | – U – |
| ಕುರುಕು | ಳನಂದ | ನಂಪವ | ನನಂದ | ನನೆಂಬ | ಮದಾಧ | ಗಂಧಸಿಂ |

ಛಂದಸ್ಸು– **ಚಂಪಕ ಮಾಲಾ ವೃತ್ತ**

* ಒಂದು ಸಾಲು ಇದೆ ಅಂದ ತಕ್ಷಣ 3–3 ಅಕ್ಷರಗಳಿಗೆ ಒಂದು ಗಣ ವಿಂಗಡಿಸಿ ಬರೆಯಿರಿ (ಗಣ ವಿಭಾಗ 1 ಅಂಕ)

* ಕೆಳಗಿನ ಲಕ್ಷಣ ತಿಳಿದು ವೃತ್ತದ ಹೆಸರು ಬರೆಯಿರಿ (ಛಂದಸ್ಸಿನ ಹೆಸರು – 1 ಅಂಕ) )

( ಪಾದದ ಆದಿಯಲ್ಲಿ ಒಂದು ಗುರು ಬಂದರೆ ಅದು **ಉತ್ಪಲ ಮಾಲಾ ವೃತ್ತ** )

(ಗುರು ಒಂದು ಆದಿಯೊಳ್ ಉತ್ಪಲಂ)

**ಉದಾಹರಣೆ :–**

ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನ ಭೋವಿಭಾಗಮಾ

**(ಮೂರು –ಮೂರು ಅಕ್ಷರಗಳಿಗೆ ಗಣ ವಿಂಗಡಿಸುವುದು)**

ಮೇದಿನಿ /ಯಂ ಕ್ರಮ /ಕ್ರಮದೆ /ಪರ್ವಿದು /ದಾತ್ತನ/ ಭೋವಿಭಾ /ಗಮಾ

| | | | | | | |
|---|---|---|---|---|---|---|
| –UU | | | | | | |
| ಮೇದಿನಿ | ಯಂ ಕ್ರಮ | ಕ್ರಮದೆ | ಪರ್ವಿದು | ದಾತ್ತನ | ಭೋವಿಭಾ | ಗಮಾ |

ಛಂದಸ್ಸು– **ಉತ್ಪಲ ಮಾಲಾ ವೃತ್ತ**

| | | | | | | |
|---|---|---|---|---|---|---|
| ಭ | ರ | ನ | ಭ | ಭ | ರ | ಲಗ |
| – UU | – U – | UUU | – U U | – UU | – U – | U– |
| ಮೇದಿನಿ | ಯಂ ಕ್ರಮ | ಕ್ರಮದೆ | ಪರ್ವಿದು | ದಾತ್ತನ | ಭೋವಿಭಾ | ಗಮಾ |

ಛಂದಸ್ಸು– **ಉತ್ಪಲ ಮಾಲಾ ವೃತ್ತ**

ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 01x 03 =03

ಅಂಕ ವಿತರಣೆ
ಅಲಂಕಾರದ ಹೆಸರು –1 ಅಂಕ
ಸಮನ್ವಯ –1 ಅಂಕ
ಲಕ್ಷಣ – 1 ಅಂಕ
ಒಟ್ಟು – 3 ಅಂಕಗಳು

1) " ಸೀತೆಯ ಮುಖ ಕಮಲದಂತೆ ಅರಳಿತು "

2) " ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ "

3) " ಒಳಗಿನ ಮಂದಿ ಗುಂಡು ಹೊಡಿದರೂ ಮುಂಗಾರಿ ಸಿಡಿಲ ಸಿಡಿದ್ಹಾಂಗ "

4) " ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ " (2016 ಜೂನ್)

5) " ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ " (2016 ಮಾರ್ಚ್) (2016 ಜೂನ್)

6) "ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು."

**ಅಲಂಕಾರ - ಉಪಮಾಲಂಕಾರ**

** ಅಂತೆ, ಹಾಂಗ, ದ್ಹಾಂಗ ,ಹಾಗೆ ಎಂಬ ಪದಗಳು ಸಾಲಿನಲ್ಲಿ ಎಲ್ಲೆ ಇದ್ದರೂ ಅದನ್ನು ಉಪಮಾಲಂಕಾರ ಎಂದು ಬರೆಯಿರಿ (ಅಲಂಕಾರದ ಹೆಸರು –1 ಅಂಕ)

ಉದಾಹರಣೆ :–

2) ' ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ '

ಅಲಂಕಾರ :– ಉಪಮಾಲಂಕಾರ

**ಉಪಮೇಯ** :– ಸತಿಪತಿಗಳೊಂದಾಗದವನ ಭಕ್ತಿ

**ಉಪಮಾನ** :–ಅಮೃತದೊಳು ಬೆರೆತ ವಿಷ

**ಉಪಮಾ ವಾಚಕ** :– ಅಂತೆ

**ಸಮಾನ ಧರ್ಮ** :– ಸ್ಪಷ್ಟವಾಗಿಲ್ಲ (ನಿಷ್ಪ್ರಯೋಜಕವಾದುದು)

**ಸಮನ್ವಯ** :– ಇಲ್ಲಿ ಉಪಮೇಯವಾದ ಸತಿಪತಿಗಳೊಂದಾಗದ ಭಕ್ತಿಯನ್ನು ಉಪಮಾನವಾದ ಅಮೃತದೊಳು ಬೆರೆತ ವಿಷಕ್ಕೆ ಹೋಲಿಸಿ ವರ್ಣಿಸಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ

**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'

**3) " ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ "**

**ಅಲಂಕಾರ :- ಉಪಮಾಲಂಕಾರ**

**ಉಪಮೇಯ :–** ಒಳಗಿನ ಮಂದಿ ಗುಂಡು ಹೊಡೆಯುವುದು

**ಉಪಮಾನ :– ಮುಂಗಾರಿನ** ಸಿಡಿಲು ಸಿಡಿಯುವುದು

**ಉಪಮಾ ವಾಚಕ :–**ಹಾಂಗ

**ಸಮಾನ ಧರ್ಮ :–**ಸುರಿಯುವುದು

**ಸಮನ್ವಯ :– ಇಲ್ಲಿ ಉಪಮೇಯವಾದ** ಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ' ಉಪಮಾಲಂಕಾರ '

**4) "ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ" (2016 ಜೂನ್)**

**ಅಲಂಕಾರ :- ಉಪಮಾಲಂಕಾರ**

**ಉಪಮೇಯ :–**ಗುಂಡು ಸುರಿಯುವುದು

**ಉಪಮಾನ :–**ಸಿಡಿಲು ಸಿಡಿಯುವುದು

**ಉಪಮಾ ವಾಚಕ :–**ಹಾಂಗ

**ಸಮಾನ ಧರ್ಮ :–**ಸುರಿಯುವುದು

**ಸಮನ್ವಯ :– ಇಲ್ಲಿ ಉಪಮೇಯವಾದ** ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**“ ಮಾರಿಗೌತಣವಾಯ್ತು ನಾಳಿನ ಭಾರತವು ”**

**“ ಸೀತೆಯ ಮುಖಕಮಲ ಅರಳಿತು.”**

**ಅಲಂಕಾರ :– ರೂಪಕಾಲಂಕಾರ**

**ಉದಾಹರಣೆ:–**

**“ ಮಾರಿಗೌತಣವಾಯ್ತು ನಾಳಿನ ಭಾರತವು ”** (2016 ಮಾರ್ಚ್)

**ಅಲಂಕಾರ :- ರೂಪಕಾಲಂಕಾರ**

**ಉಪಮೇಯ :–** ನಾಳಿನ ಭಾರತ ಯುದ್ಧ

**ಉಪಮಾನ :–** ಮಾರಿಗೆ ಔತಣ

**ಸಮನ್ವಯ** :– ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಗೆ ಔತಣಕ್ಕೆ ಅಭೇದವಾಗಿ ವರ್ಣಿಸಿರುವುದರಿಂದ ಇದು **ರೂಪಕಾಲಂಕಾರ.**

**ಲಕ್ಷಣ :–** ಉಪಮೇಯ ಮತ್ತು ಉಪಮಾನಗಳಿಗೆ ಅಭೇದತೆಯನ್ನು ಹೇಳುವುದು ‘**ರೂಪಕಾಲಂಕಾರ**’.

**ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **01 x 03 = 03**

**ಅಂಕ ವಿತರಣೆ**
**ಗಾದೆಯ ಮಹತ್ವ –1 ಅಂಕ**
**ಗಾದೆಯ ಅರ್ಥ ವಿವರಣೆ –1 ಅಂಕ**
**ಭಾಷಾ ಶೈಲಿ –1 ಅಂಕ**
**ಒಟ್ಟು –3 ಅಂಕಗಳು**

**ಯಾವುದೇ ಗಾದೆ ಮಾತು ಕೊಟ್ಟರೂ ಕೆಳಗಿನ ಈ ಮೂರು ಸಾಲುಗಳನ್ನು ಬರೆಯಿರಿ** **(1 ಅಂಕ )**

**ವೇದ ಸುಳ್ಳಾದರೂ ಗಾದೆಗಳು ಸುಳ್ಳಾಗುವುದಿಲ್ಲ. ಗಾದೆಗಳು ಹಿರಿಯರು ಹೇಳಿದ ಅನುಭವದ ಮಾತುಗಳು ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಈ ಮೇಲಿನ ಗಾದೆಯು ಬಹಳ ಪ್ರಸಿದ್ಧವಾಗಿದೆ.**

**** ಅತಿ ಆಸೆ ಗತಿ ಕೆಡಿಸಿತು**

ವೇದ ಸುಳ್ಳಾದರೂ ಗಾದೆಗಳು ಸುಳ್ಳಾಗುವುದಿಲ್ಲ. ಗಾದೆಗಳು ಹಿರಿಯರು ಹೇಳಿದ ಅನುಭವದ ಮಾತುಗಳು ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಈ ಮೇಲಿನ ಗಾದೆಯು ಬಹಳ ಪ್ರಸಿದ್ಧವಾಗಿದೆ.

ಮನುಷ್ಯನಿಗೆ ಆಸೆ ಇರಬೇಕು. ಆಸೆ ಮನುಷ್ಯನ ಸಹಜ ಪ್ರವೃತ್ತಿ. ಆಸೆ ಇಲ್ಲದವ ಬದುಕಲಾರ. ಅಸೆಯೇ ಉತ್ಸಾಹದ ಜನನಿ. ಅದು ಜೀವನದ ಸಂಚಾಲಕಶಕ್ತಿ. ಆಸೆಯ ಆಸರೆ ಇಲ್ಲದಿದ್ದರೆ ಮನುಷ್ಯ ಕಾಡುಪ್ರಾಣಿಯಂತೆ ಜೀವಿಸುತ್ತಿದ್ದ. ಆದರೆ ಆಸೆಯು ಹಿತಮಿತವಾಗಿರಬೇಕು. **ಅತಿಯಾದ ಆಸೆ ದುಃಖಕ್ಕೆ ಮೂಲ** ಎಂದು ಬುದ್ಧ ಹೇಳಿದ್ದಾನೆ. **ಅತಿಯಾದರೆ ಅಮೃತವೂ ಕೂಡ ವಿಷ**ವಾಗುತ್ತದೆ. ಅತಿಯಾಸೆಯಿಂದ ಮನುಷ್ಯ ನೆಮ್ಮದಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಪ್ರತಿ ದಿನ ಚಿನ್ನದ ಮೊಟ್ಟೆ ಇಡುತ್ತಿದ್ದ ಕೋಳಿಯನ್ನು ಪಡೆದ ರೈತನೊಬ್ಬನು ಒಂದೇ ಬಾರಿಗೆ ಶ್ರೀಮಂತನಾಗಬೇಕೆಂಬ ಅತಿಆಸೆಯಿಂದ ಕೋಳಿಯ ಹೊಟ್ಟೆಯನ್ನು ಸೀಳಿ ಒಂದೂ ಸಿಗದೆ ನಿರಾಶೆಯಾದನು.

ಮುಟ್ಟಿದೆಲ್ಲಾ ಚಿನ್ನವಾಗಬೇಕೆಂದು ವರವನ್ನು ಪಡೆದ ಮೈದಾಸ ತನ್ನ ಮಗಳನ್ನು ಚಿನ್ನದ ಗೊಂಬೆಯನ್ನಾಗಿಸಿ ದುಃಖಪಡುತ್ತಾನೆ ಆಸೆಯೆಂಬುದು ಬಹಳ ಕೆಟ್ಟದ್ದು. ಮನುಷ್ಯನು ಮುಪ್ಪನಪ್ಪಿದರೂ ಆಸೆಯು ಬಿಡದು. ಹೀಗೆ ಅತಿ ಆಸೆ ಯಾರಿಗೂ ಎಂದಿಗೂ ಒಳ್ಳೆಯದಲ್ಲ. ಆದ್ದರಿಂದ ಅತಿ ಆಸೆ ಪಡಬಾರದು ಇಲ್ಲವಾದರೆ ಅತಿಆಸೆ ಗತಿಕೆಡಿಸುತ್ತದೆ.


** **ಊಟಬಲ್ಲವನಿಗೆ ರೋಗವಿಲ್ಲ: ಮಾತು ಬಲ್ಲವನಿಗೆ ಜಗಳವಿಲ್ಲ.**

ವೇದ ಸುಳ್ಳಾದರೂ ಗಾದೆಗಳು ಸುಳ್ಳಾಗುವುದಿಲ್ಲ. ಗಾದೆಗಳು ಹಿರಿಯರು ಹೇಳಿದ ಅನುಭವದ ಮಾತುಗಳು ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಈ ಮೇಲಿನ ಗಾದೆಯು ಬಹಳ ಪ್ರಸಿದ್ಧವಾಗಿದೆ.

ಈ ಗಾದೆಯು ಊಟದ ಇತಿಮಿತಿಯನ್ನು ಮಾತಿನ ಮಹತ್ವವನ್ನು ತಿಳಿಸುತ್ತದೆ. ನಾವು ವೇಳೆಗೆ ಸರಿಯಾಗಿ ಹಿತ–ಮಿತವಾದ ಆಹಾರವನ್ನು ಸೇವಿಸುವುದರಿಂದ ಉತ್ತಮ ಆರೋಗ್ಯವನ್ನು ಪಡೆಯಬಹುದು. ಅದೇ ರೀತಿ ಮಾತು ಹಿತಮಿತವಾಗಿದ್ದರೆ ಎಲ್ಲರಿಗೂ ಹಿತವಾಗುತ್ತದೆ. ಬಿಟ್ಟಿ ಊಟ ಸಿಕ್ಕಾಗ ಗೋಣಿಚೀಲ ತುಂಬಿದಂತೆ ಊಟಮಾಡಿದರೆ ಅಜೀರ್ಣ ಉಂಟಾಗಿ ಆರೋಗ್ಯ ಹದಗೆಡುತ್ತದೆ. ಅದೇರೀತಿ ಮಾತು ಪುಕ್ಕಟೆಯೆಂದು ತಿಳಿದಂತೆ ನುಡಿದರೆ ಜಗಳಕ್ಕೆ ಕಾರಣವಾಗಬಹುದು. ಅಂತೆಯೇ ಮಾತೇ ಮಾಣಿಕ್ಯ ಮಾತೇ ಮೃತ್ಯು ಎಂಬ ಗಾದೆಯು ಪ್ರಚಲಿತದಲ್ಲಿರಬೇಕು. ಬಸವಣ್ಣನವರು ಹೇಳಿದಂತೆ ಮಾತು ನುಡಿದರೆ ಮುತ್ತಿನಹಾರದಂತಿರಬೇಕು. ಅದಕ್ಕಾಗಿ ಡಿ.ವಿ.ಜಿಯವರು ಹಿತವಿರಲಿ ವಚನದಲಿ ಎಂದು ಕಗ್ಗದಲ್ಲಿ ಹೇಳಿದ್ದಾರೆ.

ಒಟ್ಟಿನಲ್ಲಿ ಮಾತುಬಲ್ಲವ ಮಾಣಿಕ್ಯ ತಂದ ಮಾತರಿಯದವ ಜಗಳ ತಂದ ಎಂಬ ಗಾದೆ ಮಾತಿನಂತೆ ಊಟಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಗಾದೆಯು ವ್ಯಕ್ತಿ ಮಿತಹಾರಿ ಯಾಗಿರಬೇಕೆಂಬುದನ್ನು. ಮತ್ತು ಅವನ ಮಾತು ಮಿತ ಹಿತವಾಗಿರಬೇಕೆಂದು ಸಾದರಪಡಿಸುತ್ತದೆ.

**ವರ್ಣಮಾಲೆಗಳು**



| ದ್ವಿರುಕ್ತಿಗಳು | | ಅನುಕರಣಾವ್ಯಯ | ಜೋಡುನುಡಿಗಳು |
|---|---|---|---|
| ಒಂದು ಪದಭಾಗವನ್ನು ಎರಡೆರಡು ಬಾರಿ ಉಪಯೋಗಿಸುವುದಕ್ಕೆ ದ್ವಿರುಕ್ತಿ ಎನ್ನುತ್ತಾರೆ | | ಅರ್ಥವಿಲ್ಲದ ಧ್ವನಿವಿಶೇಷಗಳನ್ನು ಅನುಕರಣಾವ್ಯಯಗಳು ಎನ್ನಲಾಗುತ್ತದೆ. | ಒಂದು ಪದದ ಜೊತೆ ಪ್ರಾಸಕ್ಕಾಗಿ ಕೆಲವೊಮ್ಮೆ ಮತ್ತೊಂದು ಪದ ಬಳಸು ವುದುಂಟು. ಆ ಪದವನ್ನು ಜೋಡಿಪದ ಎನ್ನುವರು. |
| ಹೌದು ಹೌದು | ಅಬ್ಬಬ್ಬಾ | ಗುಜುಗುಜು | ಕಕ್ಕಾಬಿಕ್ಕಿ |
| ಮೆಲ್ಲಮೆಲ್ಲನೆ | ಗಾವುದಗಾವುದ | ಸರಸರ | ಕರಿನರೆ |
| ಊರೂರು | ಗರಿಗರಿ | ಝಣಝಣ | ಬಿಳಿಹೊಳೆ |
| ಖಂಡಖಂಡಗಳ | ಬಣ್ಣಬಣ್ಣಗಳ | ಘಮಘಮ | ಸತಿಪತಿ |
| ಹೆಚ್ಚು ಹೆಚ್ಚು | ಖಂಡಖಂಡಗಳ | ಧಗಧಗ | ಹಾಲ್ಜೇನು |
| ಮನೆಮನೆಗಳಲ್ಲಿ | ಸಲಸಲಕ್ಕೂ | ಪಟಪಟ | ಬಟ್ಟೆಬರೆ |
| ಕೇರಿ ಕೇರಿಗಳನ್ನು | ಇರುಳಿರುಳು | ಫಳಫಳ | ಮಕ್ಕಳುಮರಿ |
| ಬನ್ನಿ ಬನ್ನಿ | ದಿನದಿನ | ಢಣಢಣ | ಹುಳುಹುಪ್ಪಡಿ |
| ಹತ್ತಿರತ್ತಿರ | ನಟ್ಟನಡುವೆ | ಜುಳುಜುಳು | ಸೊಪ್ಪುಸದೆ |
| ನೋಡುನೋಡು | ಬಟ್ಟಬಯಲು | ಚಟಚಟ | ಹಾಲು–ಗೀಲು |
| ಓಡೋಡು | ತುದಿ ತುದಿ | ದಡದಡ | ಮನೆಮಠ |
| ದುರದುರನೆ | ಮೊತ್ತಮೊದಲು | ಘುಳುಘುಳು | |
| ಬೇಡಬೇಡ | ಗರಿಗರಿ | ಚುರುಚುರು | |
| ನಡೆನಡೆ | ಈಗೀಗ | ರೊಯ್ಯನೆ | |
| ಮೊದಮೊದಲು | ದುಂಡುದುಂಡಾದ | ಸುಯ್ಯನೆ | |
| ನಡುನಡುವೆ | ಕೊನೆಕೊನೆಗೆ | ಲಕಲಕ | |
| ಕೊತ್ತಕೊನೆಗೆ | | ಚುಮುಚುಮು | |

# ಸಮಾಸಗಳು

1) ತತ್ಪುರುಷ ಸಮಾಸ :–

( ಎರಡು ನಾಮಪದಗಳು–ಉತ್ತರ ಪದದ ಅರ್ಥ ಪ್ರಧಾನ)

| | | | |
|---|---|---|---|
| ○ ಬೆಟ್ಟದಾವರೆ | ○ ಧನಹರಣ | ○ ಪೂದೋಟ | ○ ದೈವಭಕ್ತಿ |
| ○ ತಲೆನೋವು | ○ ಪರಧನ | ○ ಸ್ವಾಮಿದ್ರೋಹ | ○ ಕಾಲುಬಳೆ |

2) ಕರ್ಮಧಾರೆಯ ಸಮಾಸ :–

(ಪೂರ್ವದಲ್ಲಿ ಗುಣವಾಚಕ ಉತ್ತರದಲ್ಲಿ ನಾಮಪದ)

| | | | |
|---|---|---|---|
| • ಹೆಮ್ಮರ | • ಹೊಸಗನ್ನಡ | • ಪೆರ್ಮಗ | • ನಲ್ಲುದುರೆ |
| • ಇಮ್ಮಾವು | • ಅತಿಕುಟಿಲ | • ಪೆರ್ಮರ | • ಕಟ್ಟೇಕಾಂತ |
| • ಮೆಲ್ವಾತು | • ಹೆದ್ದೊರೆ | | |

3) ದ್ವಿಗು ಸಮಾಸ :–

(ಪೂರ್ವದಲ್ಲಿ ಸಂಖ್ಯಾವಾಚಕ ಉತ್ತರದಲ್ಲಿ ನಾಮಪದ)

| | | | |
|---|---|---|---|
| ಮೂಗಾವುದ | ಸಪ್ತಸ್ವರಗಳು | ಐಚ್ಛೆಸೆ | ಷಟ್ಕೋನ |
| ಮಕ್ಕಣ್ಣು | ಏಕಾಕ್ಷ | ಒಗ್ಗಟ್ಟು | ನಾಕಾಳು |

4) ಅಂಶಿ ಸಮಾಸ :–

{ಅಂಶ (ಭಾಗ) / ಅಂಶಿ (ಭಾಗದಲ್ಲಿ ಭಾಗ } ಪದಗಳು ಹಿಂದು ಮುಂದು ಆಗಿರುತ್ತವೆ. (ಮೊದಲಿಗೆ ಅಂಶಿ ಬಂದು ನಂತರ ಅಂಶ ಬರುತ್ತದೆ.)

| | | | |
|---|---|---|---|
| ❖ ಹಿಂಗಾಲು | ❖ ಅಂಗೈ | ❖ ಮುಂದಲೆ | ❖ ಹಿಂದಲೆ |
| ❖ ಮುಂಗಾಲು | ❖ ಮುಂಗೈ | ❖ ನಡುರಾತ್ರಿ | ❖ ನಟ್ಟಡವಿ |
| ❖ ಕಡೆಹಣ್ಣು | ❖ ತುದಿಬೆರಳು | ❖ ಕೆಳದುಟಿ | ❖ ತುದಿಮೂಗು |

5) ದ್ವಂದ್ವ ಸಮಾಸ :-

ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮ ಪದಗಳಿದ್ದು , ಎಲ್ಲಾ ಪದಗಳ ಅರ್ಥ ಪ್ರಧಾನ

| | | | |
|---|---|---|---|
| ◆ ಗಿರಿವನದುರ್ಗಗಳು | ◆ ಮಾದ್ರಮಾಗಧಯಾದವರು | ◆ ಹನುಮಭೀಮರಾಮರು | ಭೀಮಾರ್ಜುನರು |
| ◆ ಕರಿತುರಗರಥಗಳು | ◆ ಸೂರ್ಯಚಂದ್ರರು | ◆ ಕೆರೆಕಟ್ಟೆಬಾವಿಗಳು | ◆ ಲವಕುಶರು |

6) ಕ್ರಿಯಾ ಸಮಾಸ :-

ಮೊದಲಿಗೆ ನಾಮಪದ ಕೊನೆಗೆ ಕ್ರಿಯಾಪದ ಇರುತ್ತದೆ .

| | | | |
|---|---|---|---|
| • ಮೈಮುಚ್ಚು | • ಕೈಕೊಳ್ಳುದು | • ಕೈಯಾನು | • ಬಿಲ್ಗೊಂಡು |
| • ಕಣ್ದೆರೆ | • ಕಂಗೆಡು | • ಹೊಗೆದೋರು | • ಸೂಲ್ಗೇಳಿ |
| • ಬಲವಂದು | • ಸಾಕ್ಷಿಮಾಡಿ | • ಬಿಲ್ದಿರುವನೇರಿಸಿ | • ಮೋಸಮಾಡು |

7) ಬಹುವ್ರೀಹಿ ಸಮಾಸ :-

ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮ ಪದಗಳು ಸೇರಿ ಸಮಾಸವಾದಾಗ , ಅನ್ಯಪದ ಪ್ರಧಾನ

(ವ್ಯಕ್ತಿಗಳನ್ನು ನೆನಪಿಸಿಕೊಳ್ಳಿ)

| | | | |
|---|---|---|---|
| ➢ ಹಣೆಗಣ್ಣ | ➢ ಘಟಸಂಭೂತ | ➢ ದನುಜರಿಪು | ➢ ಮದಾಂಧ |
| ➢ ಮುಕ್ಕಣ್ಣ | ➢ ಪವನನಂದನ | ➢ ಮುರಾರಿ | |
| ➢ ಚಕ್ರಪಾಣಿ | ➢ ಗಾಂಡಿವಿ | ➢ ಮೇದಿನೀಪತಿ | |
| ➢ ಅಬ್ಜೋದರ | ➢ ಇನತನೂಜ | ➢ ರಾಜೀವಸಖ | |

8) ಗಮಕ ಸಮಾಸ :-

ಮೊದಲಿಗೆ ಸರ್ವನಾಮ  ಅಥವಾ ಕೃದಂತ ಕೊನೆಯಲ್ಲಿ ನಾಮಪದ

| | | | |
|---|---|---|---|
| ಆಕಲ್ಲು | ಈಬೆಕ್ಕು | ನೆಯ್ದವಸ್ತ್ರ | ಆ ಹುಡುಗ |

# ಸಂಧಿಗಳು

| ಲೋಪ | ಆಗಮ | ಆದೇಶ | ಸವರ್ಣ | ಗುಣ |
|---|---|---|---|---|
| ಊರೂರು | ಕೈಯನ್ನು | ಮಳೆಗಾಲ | ಮಹಾತ್ಮ | ದೇವೇಂದ್ರ |
| ಬಲ್ಲೆನೆಂದು | ಮಳೆಯಿಂದ | ಮೈದೋರು | ಗಿರೀಶ | ಜ್ಞಾನೇಶ್ವರ |
| ಮಾತಂತು | ಶಾಲೆಯಲ್ಲಿ | ಬೆಂಬತ್ತು | ಸುರಾಸುರ | ಸೂರ್ಯೋದಯ |
| ಸಂಪನ್ನರಾದ | ಮರವನ್ನು | ಕಡುವೆಳ್ತು | ವಧೂಪೇತ | ಮಹರ್ಷಿ |
| ಕಾದಾಟದಾಟ | ಮಗುವಿಗೆ | ಮೆಲ್ವಾತು | ನಿಜಾಶ್ರಮ | ಮಹೇಶ |
| ನೆತ್ತರೊಂದೆ | ಮನೆಯೊಳಗೆ | ಹೊಸಗಾಲ | ಜಿನಾಲಯ | ಕಲೋಪಾಸಕ |
| ಪೂಳ್ದಡೆ | | ಧೃತಿಗೆಟ್ಟು | ಸಕಳಾಚಾರ್ಯ | ಮಂಡಳೇಶ್ವರ |
| ತೆರೆದಿಕ್ಕುವ | | ಪೋಗಲ್ವೇಳ್ಕುಂ | ಚಂದ್ರಾರ್ಕ | |
| ಮನದೊಳಗೆ | | ಕೈವಿಡಿದು | | |

| ಯಣ್ | ಜಶ್ತ್ವ | ಶ್ಚುತ್ವ | ಅನುನಾಸಿಕ | ವೃದ್ಧಿ |
|---|---|---|---|---|
| ಅತ್ಯವಸರ | ವಾಗ್ದೇವಿ | ಶರಚ್ಚಂದ್ರ | ಷಣ್ಮುಖ | ಏಕೈಕ |
| ಜಾತ್ಯತೀತ | ಅಜಂತ | ಜಗಜ್ಜ್ಯೋತಿ | ಸನ್ಮಾನ | ಜನೈಕ್ಯ |
| ಕೋಟ್ಯಾಧೀಶ್ವರ | ಷಡಾನನ | ಪಯಶ್ಶಯನ | ವಾಙ್ಮಯ | ವನೌಷಧಿ |
| ಕೋಟ್ಯಾನುಕೋಟಿ | ದಿಗಂತ | | ಉನ್ಮಾದ | ಅಷ್ಟೈಶ್ವರ್ಯ |
| | | | ತನ್ಮಯ | |

# ಅನ್ಯದೇಶಿ ಪದಗಳು

| ಗ್ರೀಕ್ ಮತ್ತು ರೋಮನ್ | ಪರ್ಶಿಯನ್ (ಪಾರ್ಶಿ) | ಅರಬ್ಬಿ | ಪೋರ್ಚುಗೀಸ್ | ಉರ್ದು | ಹಿಂದುಸ್ಥಾನಿ | ಇಂಗ್ಲೀಷ್ |
|---|---|---|---|---|---|---|
| ದಮ್ಮಡಿ<br>ದಮಡಿ<br>ದಮ್ಮ<br>ದಿನಾರ<br>ಗದ್ಯಾಣ | ಅಬಕಾರಿ<br>ರಸ್ತೆ<br>ದವಾಖಾನೆ<br>ಚೌಕಾಸಿ<br>ಜಮೀನು<br>ಅಜಮಾಹಿಸಿ<br>ಆಮದು<br>ದಲ್ಲಾಳಿ<br>ಮಸಲತ್ತು<br>ದಿವಾನ<br>ಸರಕಾರ | ಅಮಾನತು<br>ಅಸಲು<br>ಇನಾಮು<br>ಕಾಯ್ದೆ<br>ಗಲೀಜು<br>ತಕರಾರು<br>ತರಬೇತು<br>ನಕಲಿ | ಮೇಜು<br>ತಂಬಾಕು<br>ಅನಾನಸು<br>ಸಾಬೂನು<br>ಆಸ್ಪತ್ರೆ<br>ಚೊಂಬು<br>ಚಾ<br>ಇಸ್ತ್ರಿ<br>ರಸೀದಿ | ಕಿಮ್ಮತ್ತು<br>ತಾರೀಖು<br>ತಾಲೂಕು<br>ಅಹವಾಲು<br>ಇಲಾಖೆ<br>ದರ್ಜೆ<br>ಬಂದೂಕು<br>ರುಜು<br>ಶುರು<br>ಶಾಮೀಲು<br>ದಾಖಲೆ<br>ಜುಲ್ಮಾನೆ | ಅರ್ಜಿ<br>ಕಛೇರಿ<br>ಕಾರ್ಖಾನೆ<br>ಸಲಾಮು<br>ದರ್ಬಾರು<br>ಕುರ್ಚಿ<br>ಕಾಗದ<br>ಹುಕುಂ | ಬಸ್ಸು<br>ಕಾರು<br>ಕಾಲೇಜು<br>ನೈಟು<br>ಪೆನ್ನು<br>ಸ್ಯಾನಿಟರಿ<br>ಸೋಪು<br>ಡಿಪ್ಲೋಮಾ |

## ಗ್ರಾಂಥಿಕ ರೂಪ

| | |
|---|---|
| ➢ ಹೀಂಗ | ✓ ಹೀಗೆ |
| ➢ ಕಳುವ್ಯಾರೆ | ✓ ಕಳುಹಿಸಿದ್ದಾರೆ |
| ➢ ಇಲ್ಲದ್ಹಂಗ | ✓ ಇಲ್ಲದಹಾಗೆ |
| ➢ ಇಸವಾಸ | ✓ ವಿಶ್ವಾಸ |
| ➢ ಸಕ್ಕಾರಿ | ✓ ಸಕ್ಕರೆ |

# ವಾಕ್ಯ ಪ್ರಕಾರಗಳು

**1) ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು ಸಾಮಾನ್ಯ ವಾಕ್ಯವೆಂದು ಕರೆಯುತ್ತಾರೆ.**

- ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು.
- ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು.
- ವೀರೇಶ್ವರ ಪಾಠಕ್‌ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು.

**2) ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು**

**ಸಂಯೋಜಿತ ವಾಕ್ಯ**

- ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು;ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯ್ತು:ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯ್ತು.

**3) ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ಅಧೀನಗಳಾಗಿದ್ದರೆ ಅಂತ ವಾಕ್ಯವನ್ನು ಮಿಶ್ರವಾಕ್ಯ ಎನ್ನುತ್ತೇವೆ.**

- ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯ ನವರು ನಿರ್ಧರಿಸಿದರಾದರೂ ಅವರ ನಿಧಾರಕ್ಕೆ ಬ್ರಿಟಿಷ್ ಸರಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರು ಬಹುವಾಗಿ ಮರುಗಿದರು.

**ಪ್ರಧಾನ ವಾಕ್ಯ :–**

- ಅವರು ಬಹುವಾಗಿ ಮರುಗಿದರು

**ಉಪವಾಕ್ಯಗಳು :–**

- ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರು.
- ಅವರ ನಿಧಾರಕ್ಕೆ ಬ್ರಿಟಿಷ್ ಸರಕಾರದ ಅಪ್ಪಣೆ ದೊರೆಯಲಿಲ್ಲ.

# ಪದಗಳ ಅರ್ಥ

| ಪದ | ಅರ್ಥ | | ಪದ | ಅರ್ಥ |
|---|---|---|---|---|
| ಪೈಕಿ | ➢ ಸಂಬಂಧಿಕ | | ಅಬ್ಧಿ | ➢ ಸಮುದ್ರ |
| ಆರ್ತತೆ | ➢ ಬಯಕೆ | | ಇಂಬು | ➢ ಅವಕಾಶ |
| ವಿಲಾತಿ | ➢ ವಿಲಾಯಿತಿ | | ಅರ್ತಿ | ➢ ಪ್ರೀತಿ |
| ಮಸಲತ್ತು | ➢ ಪಿತೂರಿ | | ಉರ್ವಿ | ➢ ನೆಲ |
| ಕುಮಕಿ | ➢ ಸಹಾಯಕ | | ಕಿಂಕರ | ➢ ಸೇವಕ |
| ಕಾಪು | ➢ ರಕ್ಷಣೆ | | ಕುಟಿಲ | ➢ ಮೋಸ |
| ಅಂದಣ | ➢ ಪಲ್ಲಕ್ಕಿ | | ಚೋದ್ಯ | ➢ ಆಶ್ಚರ್ಯ |
| ಅನೃತ | ➢ ಸುಳ್ಳು | | ತಡಿ | ➢ ತಟ |
| ತೃಷೆ | ➢ ಬಾಯಾರಿಕೆ | | ದೃಗುಜಲ | ➢ ಕಣ್ಣೀರು |
| ದ್ರುಮ | ➢ ಮರ | | ಕದಳಿ | ➢ ಬಾಳೆ |
| ಧೃತಿ | ➢ ಧೈರ್ಯ | | ನಣ್ಪು | ➢ ನಂಟು |
| ಪೆರ್ಮೆ | ➢ ಹಿರಿಮೆ | | ಬೆಸಕೈ | ➢ ಹೇಳು |
| ವಾಜಿ | ➢ ಕುದುರೆ | | ಸೊದೆ | ➢ ಅಮೃತ |
| ಕಸರತ್ತು | ➢ ಚಮತ್ಕಾರ | | ಜಬರ್ | ➢ ಭರ್ಜರಿ |
| ಉಪಾಸನೆ | ➢ ಪೂಜೆ | | | |

## ವಿಭಕ್ತಿ ಪ್ರತ್ಯಯಗಳು

| ವಿಭಕ್ತಿ ಹೆಸರು | ಹೊಸಗನ್ನಡ ಪ್ರತ್ಯಯ | ಕಾರಕಾರ್ಥಗಳು | ಉದಾಹರಣೆ | ಹಳಗನ್ನಡ ಪ್ರತ್ಯಯ | ಉದಾಹರಣೆ |
|---|---|---|---|---|---|
| ಪ್ರಥಮ | ಉ | ಕರ್ತ | ರಾಮನು | ಮ್ | ರಾಮಮ್ |
| ದ್ವಿತೀಯ | ಅನ್ನು | ಕರ್ಮ | ರಾಮನನ್ನು | ಅಂ | ರಾಮನಂ |
| ತೃತೀಯ | ಇಂದ , ಯಿಂದ | ಕರಣ | ರಾಮನಿಂದ | ಇಂ,ಇಂದಂ,ಇಂದೆ | ರಾಮನಿಂ |
| ಚತುರ್ಥಿ | ಗೆ ,ಇಗೆ ,ಕ್ಕೆ | ಸಂಪ್ರದಾನ | ರಾಮನಿಗೆ | ಗೆ ,ಕೆ,ಕ್ಕೆ | ರಾಮನಿಗೆ |
| ಪಂಚಮಿ | ದೆಸೆಯಿಂದ | ಅಪದಾನ | ರಾಮನದೆಸೆಯಿಂದ | ಅತ್ತಣಿಂ ,ಅತ್ತಣಿಂದಂ | ರಾಮನತ್ತಣಿಂ |
| ಷಷ್ಠಿ | ಅ | ಸಂಬಂಧ | ರಾಮನ | ಅ | ರಾಮನ |
| ಸಪ್ತಮಿ | ಅಲ್ಲಿ | ಅಧಿಕರಣ | ರಾಮನಲ್ಲಿ | ಒಳ್ | ರಾಮನೊಳ್ |

# ಲೇಖನ ಚಿಹ್ನೆಗಳು

**ಅರ್ಧವಿರಾಮ ಚಿಹ್ನೆ :– ( ; )** ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಬಳಸುವ ಚಿಹ್ನೆ ಅರ್ಧವಿರಾಮ ಚಿಹ್ನೆ –( ; )

ಉದಾಹರಣೆಗೆ :– ತಾವು ಕಡಿಮೆ ಮಾತನಾಡಿದ್ದೀರಿ ;ಹೆಚ್ಚು ಕೆಲಸ ಮಾಡಿದ್ದೀರಿ.

**ಭಾವಸೂಚಕ ಚಿಹ್ನೆ :– ( ! )** ಹರ್ಷ,ಆಶ್ಚರ್ಯ,ಸಂತೋಷ,ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವಾಗ ಪದಗಳ ಮುಂದೆ ಬಳಸುವು ಚಿಹ್ನೆ ಭಾವಸೂಚಕ ಚಿಹ್ನೆ– ( ! )

ಉದಾಹರಣೆಗೆ :– ಅಯ್ಯೋ ! ಹೀಗಾಗ ಬಾರದಿತ್ತು !

ಅಬ್ಬಾ ! ಎಷ್ಟೊಂದು ಸುಂದರ !

**ಉದ್ಧರಣ ಚಿಹ್ನೆ :– ( " ")** ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ ಉದ್ಧರಣ ಚಿಹ್ನೆ – (" ")

ಉದಾಹರಣೆಗೆ :– (ವಿಶ್ವೇಶ್ವರಯ್ಯನವರು ಹೇಳಿದ ಮಾತನ್ನು ಬರೆಯುವಾಗ )

" ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಅಜನ್ಮಸಿದ್ಧ ಹಕ್ಕಾಗಬೇಕು"

**ವಾಕ್ಯ ವೇಷ್ಟನ ಚಿಹ್ನೆ :– ( ' ' )** ಪಾರಿಭಾಷಿಕ ಪದಗಳನ್ನು ಬಳಸುವಾಗ ,ಅನ್ಯ ಭಾಷೆಯ ಪದಗಳನ್ನು ಬಳಸುವಾಗ ಉಪಯೋಗಿಸುವ ಚಿಹ್ನೆ ವಾಕ್ಯವೇಷ್ಟನ ಚಿಹ್ನೆ– ( ' ' )

ಉದಾಹರಣೆಗೆ :– ಕನ್ನಡ ಭಾಷೆಯಲ್ಲಿ ' ಇಂಗ್ಲಿಷ್ ' ಪದಗಳನ್ನು ಬಳಸಲಾಗುತ್ತದೆ.

**ವಿವರಣಾತ್ಮಕ ಚಿಹ್ನೆ :– ( :– )** ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಚಿಹ್ನೆ ವಿವರಣಾತ್ಮಕ ಚಿಹ್ನೆ – ( :– )

ಉದಾಹರಣೆಗೆ :–

ಸಮ್ಯಕ್ ದರ್ಶನ :– ಜೈನಮತದ ಬಗ್ಗೆ ಇರುವ ವಿಶ್ವಾಸ.

# ತದ್ಧಿತಾಂತಗಳು

( ನಾಮಪದಗಳ ಮೇಲೆ ಮಾತ್ರ ತದ್ಧಿತ ಪ್ರತ್ಯಗಳು ಬರುತ್ತವೆ. ನಾಮಪದಗಳನ್ನು ಗುರುತಿಸಿಕೊಳ್ಳಿ)

## 1) ತದ್ಧಿತಾಂತನಾಮ :–

(ಗುರುತಿಸುವಿಕೆ: ಇವುಗಳು ವ್ಯಕ್ತಿಗಳನ್ನು ಸೂಚಿಸುತ್ತವೆ. ವ್ಯಕ್ತಿಗಳನ್ನು ನೆನಪಿಸಿಕೊಳ್ಳಿ)

| ತದ್ಧಿತಾಂತನಾಮ | | | |
|---|---|---|---|
| ಪುಲ್ಲಿಂಗ | | | ಸ್ತ್ರೀಲಿಂಗ |
| • ಬಳೆಗಾರ | • ಲೆಕ್ಕಿಗ | • ಓಲೆಕಾರ | • ಬಳೆಗಾರ್ತಿ |
| • ಕೋಲುಕಾರ | • ಸಾಲಗಾರ | • ಹಾವಾಡಿಗ | • ಕೋಲುಕಾರ್ತಿ |
| • ಕನ್ನಡಿಗ | • ಗುಣವಂತ | • ಲಂಚಕೋರ | • ಕನ್ನಡತಿ |
| • ಸಿರಿವಂತ | • ಬುದ್ಧಿವಂತ | • ಹೂವಾಡಿಗ | • ಸಿರಿವಂತೆ |
| • ಒಕ್ಕಲಿಗ | • ಮಡಿವಾಳ | • ಕುಂಬಾರ | • ಒಕ್ಕಲಗಿತ್ತಿ |
| • ಮಾಲೆಗಾರ | • ವಾಚಾಳಿ | • ಸಾಲಗಾರ | • ಮಾಲೆಗಾರ್ತಿ |
| • ಬೇಟೆಗಾರ | • ಲಂಚಗುಳಿ | | |

## 2) ತದ್ಧಿತಾಂತ ಭಾವನಾಮ

(ಗುರುತಿಸುವಿಕೆ : ವ್ಯಕ್ತಿಯ ಸ್ಥಿತಿಯನ್ನು ನೆನೆಪಿಸುತ್ತವೆ.)

| ತದ್ಧಿತಾಂತ ಭಾವನಾಮ | |
|---|---|
| • ಜಾಣತನ | • ಜಾಣ್ಮೆ |
| • ಚೆಲುವಿಕೆ | • ಹಿರಿಮೆ |
| • ಕಪ್ಪು | • ದೊಡ್ಡತನ |
| • ಪೆರ್ಮೆ | • ಬಡತನ |
| • ಸಿರಿತನ | • |

## 3) ತದ್ಧಿತಾಂತ ಅವ್ಯಯ

**(ಗುರುತಿಸುವಿಕೆ : ತದ್ಧಿತಾಂತ ಅವ್ಯಯಗಳಾದ ಮೇಲೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿದರೆ ಸೇರುವುದಿಲ್ಲ ಗ್ವಮನಿಸಿ)**

| ತದ್ಧಿತಾಂತ ಅವ್ಯಯ | |
|---|---|
| • ಚಂದ್ರನಂತೆ<br>• | • ಅವನಂತೆ |
| • ಚಂದ್ರನವೊಲ್<br>• | • ಅವನವೊಲ್ |
| • ನನ್ನವೊಲು<br>• | • ಅವಳವೊಲು |
| • ಮನೆಯವೋಲು<br>• | • ಇದರವೋಲ್ |
| • ಕ್ಷರಡಿವೋಲ್<br>• | • ನದಿಯವೋಲ್ |
| • ಮನೆಯತನಕ<br>• | • ಹಿಮಾಲಯದತನಕ |
| • ಶಾಲೆಯವರೆಗೆ<br>• | • ಪಟ್ಟಣದವರೆಗೆ |
| • ಇವಳಮಟ್ಟಿಗೆ<br>• | • ಸುಂದರನಮಟ್ಟಿಗೆ |
| • ನನಗೋಸ್ಕರ<br>• | • ಬೆಕ್ಕಿಗೋಸ್ಕರ |
| • ರಾಧೆಗಿಂತ | • ಅದಕ್ಕಿಂತ |
| • ನಿನಗಾಗಿ | • ಇದಕ್ಕಾಗಿ |
| • ಮದುವೆಗೋಸುಗ | • ಕಾಗೆಗೋಸುಗ |

# ಕೃದಂತಗಳು

(ಕ್ರಿಯಾಪದಗಳನ್ನು ನೆನಪಿಸಿಕೊಳ್ಳಿ–ಕ್ರಿಯಾಪದಗಳ ಮೂಲರೂಪ ಧಾತು–)

## 1) ಕೃದಂತನಾಮ :–

**(ಗುರುತಿಸುವಿಕೆ ;ಧಾತುಗಳ ಮೇಲೆ ಕಾಲಸೂಚಕ ಪ್ರತ್ಯಯಗಳು (ವ,ಉವ,ದ,ಅದ) ಬಂದು ಕೃತ್ ಪ್ರತ್ಯಯಗಳು (ಅ) ಕೊನೆಯಲ್ಲಿ ಇರುತ್ತವೆ. ವ್ಯಕ್ತಿಯ ಕ್ರಿಯೆಯನ್ನು ನೆನಪಿಸಿಕೊಳ್ಳಿ )**

| ವರ್ತಮಾನ ಕೃದಂತ | ಭೂತ ಕೃದಂತ | ನಿಷೇಧ ಕೃದಂತ |
|---|---|---|
| ‘ ವ ‘ ‘ ಉವ ’ | ‘ ದ ‘ | ‘ ಅದ ‘ |
| • ಓಡುವ | • ಓಡಿದ | • ಓಡದ |
| • ಬಾಳುವ | • ಬಾಳಿದ | • ಬಾಳದ |
| • ಬರೆಯುವ | • ಬರೆದ | • ಬರೆಯದ |
| • ತಿನ್ನುವ | • ತಿಂದ | • ತಿನ್ನದ |
| • ನಡೆಯುವ | • ನಡೆದ | • ನಡೆಯದ |

## 2) ಕೃದಂತ ಭಾವನಾಮ :–

(ಗುರುತಿಸುವಿಕೆ : ಕ್ರಿಯೆಯ ಭಾವವನ್ನು ನೆನೆಯಿರಿ . ಉದಾ : ಓಡುವ ಕ್ರಿಯೆಯ ಭಾವ –ಓಟ)

| | |
|---|---|
| • ಓಟ | • ನೋಟ |
| • ಬಾಳುವಿಕೆ | • ಬರೆಯುವಿಕೆ |
| • ಅಂಜಿಕೆ | • ನಂಬಿಕೆ |
| • ಉಡುಗೆ | • ತೊಡುಗೆ |
| • ನಗುವುದು | • ತಿನ್ನುವುದು |
| • ನೆನಪು | • ಮೆರವಣಿಗೆ |
| • ಹೊಲಿಗೆ | • ನೋವು |
| • ಮಾಟ | • ತಿನ್ನವಿಕೆ |
| • ನಡೆತ | • ಒಪ್ಪಿತ |

## 3) ಕೃದಂತಾವ್ಯಯ:–

**(ಗುರುತಿಸುವಿಕೆ : ಕೃದಂತಾವ್ಯಯಗಳಾದ ನಂತರ ವಿಭಕ್ತಿ ಪ್ರತ್ಯಯ ಹತ್ತುವುದಿಲ್ಲ ಮಾಡಿನೋಡಿ)**

**(ಇವುಗಳನ್ನು ಬಳಸಿಕೊಂಡುವಾಕ್ಯ ರಚಿಸಿದರೆ( ಸ್ತ್ರೀಲಿಂಗ,ಪುಲ್ಲಿಂಗ /ಕಾಲ/ವಚನ ದಲ್ಲೂ ಬದಲಾಗುವುದಿಲ್ಲ)**

| | |
|---|---|
| • ಮಾಡುತ್ತ | • ತಿನ್ನುತ್ತ |
| • ಮಾಡದೆ | • ಬರದೆ |
| • ಮಾಡಲು | • ನೋಡಲು |
| • ಮಾಡಲಿಕ್ಕೆ | • ಕೇಳಿ |
| • ಮಾಡ | • ಕೇಳಲಿಕ್ಕೆ |
| • ಮಾಡಿ | • ನೋಡ |
| • ಬರೆದು | • ಮಾಡುತ |
| • ತಿಂದು | • ನಡೆಯುತ್ತ |
| • ನೋಡುತ್ತ | • ಓಡಿ |

## ನಾಮಪದಗಳು

| ರೂಢನಾಮಗಳು | ಅಂಕಿತನಾಮಗಳು | ಅನ್ವರ್ಥನಾಮಗಳು | ಸರ್ವನಾಮಗಳು | ಆತ್ಮಾರ್ಥಕ ಸರ್ವನಾಮಗಳು | ಪ್ರಶ್ನಾರ್ಥಕ ಸರ್ವನಾಮ |
|---|---|---|---|---|---|
| ನದಿ | ಸಹದೇವ | ವ್ಯಾಪಾರಿ | ಅವನು ,ಇವನು | ತಾನು | ಯಾರು ? |
| ಪರ್ವತ | ಧರ್ಮರಾಯ | ವಿದ್ವಾಂಸ | ಅವಳು ,ಇವಳು | ತಾವು | ಏನು ? |
| ಊರು | ರಾಹುಲ | ವಿಜ್ಞಾನಿ | ಅದು , ಇದು | ತನ್ನ | ಯಾವುದು ? |
| ದೇಶ | ಕಮಲಾಕ್ಷ | ಪೂಜಾರಿ | ಅವರು , ಇವರು | ತಮ್ಮ | |
| ಮನುಷ್ಯ | | | ಅವರು , ಇವರು | | |
| | | | ಅವು , ಇವು | | |

# ತತ್ಸಮ–ತದ್ಭವ

| ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ |
|---|---|---|---|
| ವಿಜ್ಞಾನ – ಬಿನ್ನಾಣ | ಸುಧೆ – ಸೊದೆ | ವಂಶ – ಬಂಚ | ಶುನಕ – ಸೊಣಗ |
| ಮುಖಶಾಲೆ – ಮೊಗಸಾಲೆ | ತಟ – ತಡಿ | ಸ್ಥಾನ – ತಾಣ | ಧರ್ಮ – ಧಮ್ಮ |
| ದಾತೃ – ದಾತಾರ | ವ್ಯಯ – ಬೀಯ | ಯಶ – ಜಶ | ಪಕ್ಷಿ – ಹಕ್ಕಿ |
| ವಿಜ್ಞಾಪನೆ – ಬಿನ್ನಹ | ವ್ಯಾಪಾರಿ – ಬೇಹಾರಿ | ಪಟ್ಟಣ – ಪತ್ತನ | ಬ್ರಮ್ಹ – ಬೊಮ್ಮ |
| ಸಾಮಂತ – ಸಾವಂತ | ಸಂದೇಹ – ಸಂದೆಯ | ಕಾರ್ಯ – ಕಜ್ಜ | ಚಂದ್ರ – ಚಂದಿರ |
| ಕೋಕಿಲಾ – ಕೋಗಿಲೆ | ಅಮೃತ – ಅಮರ್ದು | ಕಣಿ – ಗಣಿ | ಅಟವಿ – ಅಡವಿ |
| ದೀಪಿಕಾ – ದೀವಿಗೆ | ಕಾವ್ಯ – ಕಬ್ಬ | ಪುಣ್ಯ –ಹೂನ್ಯ | ಪ್ರಸಾದ – ಹಸಾದ |
| ವಂಧ್ಯಾ – ಬಂಜೆ | ಯಜ್ಞ – ಜನ್ನ | ಶಶಿ –ಸಸಿ | ಕಳಸ – ಕಳಸ |
| ವೀರ – ಬೀರ | ದ್ಯೂತ – ಜೂಜು | ವಿದ್ಯಾಧರ –ಬಿಜ್ಜೋಧರ | ಕುಠಾರ – ಕೊಡಲಿ |
| ಅರ್ಕ – ಎಕ್ಕ | ರಾಜ – ರಾಯ | ವೈಶಾಖ – ಬೇಸಗೆ | ವರ್ಷ – ವರುಷ |
| ದೃಷ್ಟಿ – ದಿಟ್ಟಿ | ದಿಶೆ – ದಿಶಾ | ಪಾದುಕಾ – ಹಾವುಗೆ | ಭಕ್ತ – ಬಕುತ |
| ಗ್ರಹ – ಗರ | ಶ್ರೀ – ಸಿರಿ | ಕವಿ – ಕಬ್ಬಿಗ | ತಪಸ್ವಿ – ತವಸಿ |
| | | | |
| | | | |
| | | | |
| | | | |
| | | | |
| | | | |
| | | | |

ಖಾಸಗಿ ಪತ್ರಬರಹ

(ಪತ್ರಬರಹದಲ್ಲಿ ಕೊಟ್ಟಿರುವ ವಿಳಾಸ ಬರೆಯಿರಿ)

ಇಂದ

______________________

______________________

ದಿನಾಂಕ ______________________

ಪೂಜ್ಯ ತೀರ್ಥರೂಪುರವರಿಗೆ ನಿಮ್ಮ ಮಗ/ಳು ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು (ತಂದೆಗೆ ಬರೆಯುವಾಗ )

________________________________________________________________________________

________________________________________________________________________________

________________________________________________________________________________

________________________________________________________________________________

________________________________________________________________________________

________________________________________________________________________________

________________________________________________________________________________

____________________________________________________

ಪ್ರಣಾಮಗಳುಗಳೊಂದಿಗೆ

ಇಂತಿ ನಿಮ್ಮ ಮಗ/ಳು

ಹೊರವಿಳಾಸ

________________________

________________________

_______________________

* ಪೂಜ್ಯ ಮಾತೃಶ್ರೀಯವರಿಗೆ ನಿಮ್ಮ ಮಗ/ಳು ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು( ತಾಯಿಗೆ)

* ಪೂಜ್ಯ ತೀರ್ಥರೂಪು ಸಮಾನರಾದ _________ ರವರಿಗೆ _________ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು

(ಹಿರಿಯರಿಗೆ ಪುರುಷರಿಗೆ)

*ಪೂಜ್ಯ ಮಾತೃಶ್ರೀ ಸಮಾನರಾದ___________ ರವರಿಗೆ_________ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು( ಹಿರಿಯ ಸ್ತ್ರೀಯರಿಗೆ)

## ಹತ್ತನೇ ತರಗತಿಯ ಮಾದರಿ ಪ್ರಶ್ನೆ ಪತ್ರಿಕೆ

## ಪ್ರಥಮ ಭಾಷೆ ಕನ್ನಡ

ಗರಿಷ್ಠ ಅಂಕಗಳು: 100 ಅವಧಿ: 3: 15 ನಿ

ಸೂಚನೆಗಳು: ಪ್ರಶ್ನೆ ಪತ್ರಿಕೆಯು ಎ, ಬಿ, ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.ಉತ್ತರಗಳನ್ನು ನೇರವೂ, ಸ್ಪಷ್ಟವೂ, ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ ಪ್ರತಿ ಪ್ರಶ್ನೆಗೂ ಉತ್ತರಕ್ಕಾಗಿ ಮೀಸಲಿಟ್ಟ ಜಾಗದಲ್ಲಿ ಉತ್ತರ ಬರೆಯುವುದು ಖಡ್ಡಾಯ

### ಭಾಗ–'ಎ'

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **9x1=9**

1. ಶ್ರೀರಾಮನಿಗೆ ಸಮರ್ಪಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
2. ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮಗವೇನು?
3. ವಿಶ್ವೇಶ್ವರಯ್ಯ ಅವರನ್ನು ದಿವಾನವರಾಗಿ ನೇಮಿಸಿದವರು ಯಾರು?
4. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?
5. ಶಾನುಭೋಗದ ಬ್ರಹ್ಮಾಸ್ತ್ರ ಯಾವುದು?
6. ಮಾನವನ ಸ್ವಭಾವವನ್ನು ವಚನಕಾರರು ಯಾವುದಕ್ಕೆ ಹೋಲಿಸಿದ್ದಾರೆ?
7. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?
8. 'ಸಂಕಟಕೆ ಗಡಿ ಇಲ್ಲ' ಕಾವ್ಯದ ಆಕರ ಗ್ರಂಥ ಯಾವುದು?
9. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತು?

ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ **10x2=20**

10. ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು?
11. ನೆಹರೂ ಅವರು ಸರ್.ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?
12. ದೃಷ್ಟಬುದ್ದಿಗೆ ಆತನ ತಂದೆ ಏನೆಂದು ಸಲಹೆ ನೀಡಿದನು?
13. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು?
14. ಭಕ್ತಿ ಮತ್ತು ನಿಷ್ಠೆ ಬಗ್ಗೆ ಜೇಡರ ದಾಸಿಮಯ್ಯನ ಅಭಿಪ್ರಾಯವೇನು?
15. ನನ್ನಾಸೆ ಕವನದಲ್ಲಿ ಕವಯಿತ್ರಿವರ ಆಸೆಗಳೇನು?
16. ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾದ್ಯವಾಗಲಿಲ್ಲ?
17. ಲೇಖಕರ ಪ್ರಕಾರ ವಿಶ್ವಧರ್ಮಯಾವಾಗ ರೂಪಿತವಾಗಬಲ್ಲದು?
18. ಕ್ರಿಯಾ ಸ್ವಾತಂತ್ರ್ಯ ಎಂದರೇನು?
19. ಎಂಟನೇಯ ಒಗಟಿನ ಉತ್ತರ 'ಕೊಕ್ಕರೆ' ಎಂಬುದನ್ನು ತಿಳಿಸಿ.

ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭಸಹಿತ ಸ್ವಾರಸ್ಯ ಬರೆಯಿರಿ **4x3=12**

20. "ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ"?
21. "ವನ್ರಯ್ಯ್ ಏನ್ ಮಾಸ್ತ್ರಾ ಇದ್ದೀರಿ"?
22. "ಜೀವ ಸತ್ತು ಹೋಗುವುದು ಗೊತ್ತಾ"
23. "ನಿನ್ನ ಪದೆಸೆಯ ಬಯಸುವನಲ್ಲ"?

ಈ ಕೆಳಗಿನ ಕವಿಗಳ ಸ್ಥಳ,ಕಾಲ,ಕೃತಿಗಳು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ **2x3=06**

24. ವಿ.ಕೃಗೋಕಾಕ್
25. ಕುಮಾರವ್ಯಾಸ

ಈ ಕೆಳಗಿನ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. **2x3=06**

26. ಕಲುಷಿತವಾದೀ------------------

-------------------------------

-------------------------------

------------------------------- ಮುಟ್ಟೋಣ

ಅಥವಾ

ಮತಗಳೆಲ್ಲವೂ-------------------

-------------------------------

-------------------------------

------------------------------- ಬಿತ್ತೋಣ

ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯಮಾಪನವನ್ನಾಧರಿಸಿ ಸಾರಾಂಶ ಬರೆಯಿರಿ. **2 x 3=06**

27. ಕರಿನರೆ ಬಣ್ಣದ ಪುಚ್ಚಗಳುಂಟು
ಬಿಳಿ-ಹೊಳೆ ಬಣ್ಣದ ಗರಿ-ಗರಿಯುಂಟು
ಕೆನ್ನನ ಹೊನ್ನನ ಬಣ್ಣ-ಣ್ಣಗಳ
ರೆಕ್ಕೆಗಳೆರಡೂ ಪಕ್ಕದಲುಂಟ್ಟು
ಹಕ್ಕಿ ಹಾರುತಿದೆ ನೋಡಿದಿರಾ?

ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ. **2 x 4=08**

28. ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷ ಭೂಷಣಗಳು ಹೇಗಿದ್ದವು?

ಅಥವಾ

ವಿದ್ಯುತ್ ಒಲೆಯಿಂದ ಉಂಟಾಗಬಹುದಾಗಿದ್ದ ಅಪಾಯವನ್ನು ಗೊರೂರರು ಹೇಗೆ ಪರಿಹರಿಸಿಕೊಂಡರು?

**29. ದುರ್ಯೋಧನನ ತಂದೆ–ತಾಯಿಯವರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ**

**ಅಥವಾ**

**ಧೃತರಾಷ್ಟ್ರನು ಸಂಧಿ ಮಾಡಿಕೋ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು?**

**ಈ ಕೆಳಗಿನ ಗದ್ಯ ಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1 x 4=4(2+2)**

ಕ್ರೋಧವು ವ್ಯಾಧನಿದ್ದಂತೆ. ಜೀವನದ ಕೈದೋಟವನ್ನು ಸಹ ಅರಣ್ಯವೆಂದು ತಿಳಿದುಕೊಂಡು ಅದು ಹಾಳು ಮಾಡಬಲ್ಲದು. ಹೀಗೆ ಸಿಟ್ಟು ಬಂದಾಗ ರಕ್ತವು ಸುಡುವುದಲ್ಲದೆ. ಜೀವನದ ಎಣ್ಣೆಯೂ ಸುಡುವುದು. ಬತ್ತಿಯೂ ಸಣ್ಣದಾಗುವುದು. ಕ್ರೋಧ ಬುದ್ಧಿಯನ್ನು ತಿನ್ನುತ್ತದೆ ಎಂದು ತಿಳಿದ ಮೇಲೂ ಅದನ್ನು ಅಡಗಿಸದಿದ್ದರೆ ತನ್ನ ನಾಶ ಕಂಡುಕೊಂಡಂತೆ. ಎಣ್ಣೆಯೂ ಸುಡುವುದೆಂದರೆ ಅದರಿಂದ ಜೀವನದ ಬೆಳಕು ಬರಬೇಕು. ತಾಳ್ಮೆಯಲ್ಲಿ ತಡವರಿಕೆಯಿಲ್ಲ , ಭಯವಿಲ್ಲ, ವಿನಾಶವಿಲ್ಲ. ತಾಳುವಿಕೆಗಿಂತ ತಪವಿಲ್ಲ ಎಂಬ ದಾಸರ ಮಾತು ಶ್ರೇಷ್ಠ. ಸಾಧನೆಗೆ ತಾಳುವಿಯೇ ತಳಹದಿ. ಸಾಧಕರಾದದ್ದು ಕ್ರೋಧದಿಂದಲ್ಲ ; ಸಂಯಮ ಗುಣಗಳಿಂದ ಆದ್ದರಿಂದ ತಾಳಿದವನು ಬಾಳಿಯಾನು ಎಂಬ ಗಾದೆ ಪ್ರಚಲಿತದಲ್ಲಿರುವುದು. ಮನುಷ್ಯರಿಗೆ ಕ್ರೋಧಲ್ಲಿ ಫಲವಿಲ್ಲ ತಪಸ್ಸಿನ ಫಲ ತಾಳ್ಮೆಯಲ್ಲಿ ಅಡಗಿದೆ.

**ಪ್ರಶ್ನೆಗಳು :**

1 . **ಕ್ರೋಧದ ಪರಿಣಾಮವೇನಾಗುತ್ತದೆ ?**
2 . **ಮನುಷ್ಯರಿಗೆ ತಾಳ್ಮೆಯ ಫಲವೇನು ?**

**'ಭಾಗ–ಬಿ'**

**ಈ ಕಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರಗಳನ್ನು ಆರಿಸಿ ಉತ್ತರಕ್ಕಾಗಿಯೋ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **10 x1=10**

**30. ಇವುಗಳಲ್ಲಿ ಅನುಸ್ವಾರ ಮತ್ತು ವಿಸರ್ಗ ಸಹಿತ ಪದ**

**ಎ) ಅಂತಃಪುರ** **ಬಿ) ದು:ಖ**

**ಇ) ಅನಂತರ** **ಡಿ) ಸನ್ಮಾನ**

**31. ಈ ಕೆಳಗಿನ ಪದಗಳಲ್ಲಿ ಗುಣ ಸಂಧಿಗಯಾಗುವ ಪದ**

**ಎ) ಐಕ್ಯೈಕ** **ಬಿ) ಸೂರ್ಯೋದಯ**

**ಸಿ) ಅತ್ಯವಸರ** **ಡಿ) ದಿಗಂತ**

**32. 'ಅಮೃತ ' ಪದದ ತದ್ಭವ ರೂಪ**

**ಎ) ಆವೃತ** **ಬಿ) ಅಮರ್ದು**

**ಸಿ) ಅಮದಳ** **ಡಿ) ಹಾಲು**

33. 'ಕೆಲದೊಳ್' ಪದದಲ್ಲಿರುವ ವಿಭಕ್ತಿ ಪ್ರತ್ಯಯ

ಎ) ಪಂಚಮಿ ಬಿ) ಷಷ್ಠಿ

ಸಿ) ಸಪ್ತಮಿ ಡಿ) ಪ್ರಥಮ

34. 'ಹರ್ಷ,ಆಶ್ಚರ್ಯ, ಸಂತೋಷ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಸೂಚಿಸುವ ಚಿಹ್ನೆ.

ಎ) ಭಾವಸೂಚಕ ಬಿ) ಪ್ರಶ್ನಾರ್ಥಕ

ಸಿ) ಆವರಣ ಡಿ) ಉದ್ಧರಣ

35. 'ಹಿಂದಲೆ ' ಪದವೂ ಈ ಸಮಾಸಕ್ಕೆ ಉದಾಹರಣೆ.

ಎ) ದ್ವಿಗು ಸಮಾಸ ಬಿ) ಅಂಶಿಸಮಾಸ

ಸಿ) ಕ್ರಿಯಾಸಮಾಸ ಡಿ ಡಿ) ತತ್ಪುರುಷ ಸಮಾಸ

36. ಈ ಕೆಳಗಿನವುಗಳಲ್ಲಿ ತದ್ಧಿತಾಂತನಾಮಕ್ಕೆ ಉದಾಹರಣೆ.

ಎ) ಕಪ್ಪು ಬಿ) ಚಂದ್ರನಂತೆ

ಸಿ) ಸಿರಿವಂತ ಡಿ) ಚಲುವಿಕೆ

37. 'ವಿದ್ವಾಂಸ' ಎಂಬ ಪದವೂ ಈ ವ್ಯಾಕರಣಾಂಶಕ್ಕೆ ಉದಾಹರಣೆ.

ಎ) ಸರ್ವನಾಮ ಬಿ) ರೂಢನಾಮ

ಸಿ) ಅಂಕಿತನಾಮ ಡಿ) ಅನ್ವರ್ಥಕನಾಮ

38. 'ಗುರುಮೂರಿರೆ ' ಈ ಅಕ್ಷರಗಣವಾಗುತ್ತದೆ.

ಎ) ಮ ಗಣ ಬಿ) ಯ ಗಣ

ಸಿ) ರ ಗಣ ಡಿ) ಜ ಗಣ

39. 'ಪ್ರವಾಸವು ಅನುಭವಗಳನ್ನು ಹೆಚ್ಚಿಸುತ್ತದೆ ' ಈ ವಾಕ್ಯವು

ಎ) ಸಾಮಾನ್ಯವಾಕ್ಯ ಬಿ ) ಮಿಶ್ರವಾಕ್ಯ

ಸಿ) ಸಂಯೋಜಿತವಾಕ್ಯ ಡಿ) ಯಾವುದೂ ಅಲ್ಲ.

ಒಂದನೇ ಪದಕ್ಕೆ ಸಂಬಂಧಿಸಿದಂತೆ ಮೂರನೇ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ **1x4=4**

40. ಅಜ್ಜ : ಸಜಾತಿ ಸಂಯುಕ್ತಾಕ್ಷರ :: ಭಕ್ತ :-----------------

41. ಬನ್ನಿ ಬನ್ನಿ : ದ್ವಿರುಕ್ತಿ :: ಹುಳಹುಪ್ಪಡಿ :-----------------

42. ಕಳುವ್ಯಾರೆ : ಕಳುಹಿಸಿದ್ದಾರೆ :: ಇಲ್ಲಹ್ಹಂಗ :-----------------

43. ತಂಬಾಕು : ಪೋರ್ಚಗೀಸ್ :: ಬಂದೂಕು :---------------

ಈ ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. **1x3=3**

44. ಏನು ಹೇಳೈಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ

ಸೂರುಗಳ ಬೆಸಕೈಸಿಕೊಂಬುವುದು ಸೇರದೇನಿನಗೆ

ಅಥವಾ

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿರಿ.

ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಿಸಿರಿ **1x3=3**

45. 'ಸಿಡಿಲ ಸಿಡಿದ್ಹಾಂಗ್ ಗುಂಡು ಸುರಿದಾವ'

ಅಥವಾ

'ಮಾರಿಗೌತಣವಾಯ್ತು ನಾಳಿನ ಭಾರತವು'

## 'ಭಾಗ–ಸಿ'

ಕೆಳಗಿನ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. **1x3=3**

46. * ದೇಶಸುತ್ತಿ ನೋಡು ಕೋಶ ಓದಿ ನೋಡು
* ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?
* ಅತಿ ಆಸೆ ಗತಿ ಕೇಡು

47. ನಿಮ್ಮನ್ನು ಬೆಳಗಾವಿಯ ವಿವೇಕಾನಂದ ಪ್ರೌಢಶಾಲೆಯ ಸುಮಂತ ಎಂದು ಭಾವಿಸಿಕೊಂದು ನಿಮ್ಮ ಗ್ರಾಮದಲ್ಲಿ ಒಂದು ಗ್ರಂಥಾಲಯ ಆರಂಭಿಸಿ ಕೊಡುವಂತೆ ನಿಮ್ಮ ಜಿಲ್ಲಾಧಿಕಾರಿಗೊಂದು ಮನವಿ ಪತ್ರ ಬರೆಯಿರಿ. **1x5=5**

ಅಥವಾ

ನಿಮ್ಮನ್ನು ಬೆಳಗಾವಿಯ ವಿವೇಕಾನಂದ ಪ್ರೌಢಶಾಲೆಯ ಸುಮಂತ ಎಂದು ಭಾವಿಸಿಕೊಂದು ನಿಮ್ಮ ಪರೀಕ್ಷಾ ಪೂರ್ವ ಸಿದ್ಧತೆ ಕುರಿತು ಬಳ್ಳಾರಿಯಲ್ಲಿರುವ ನಿಮ್ಮ ತಂದೆಗೆ ಒಂದು ಪತ್ರವನ್ನು ಬರೆಯಿರಿ.

48. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಲ್ಲಿ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ. **1x5=5**

- ಸ್ವಚ್ಛ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ.
- ಶಿಕ್ಷಣದಲ್ಲಿ ಗಣಕಯಂತ್ರದಪಾತ್ರ
- ಶಾಲಾ ಗ್ರಂಥಗಳ ಸದ್ಬಳಕೆ.

------*****------